ಸಂಪುಟ 01 | ಸಂಚಿಕೆ 147 | ಭಾನುವಾರ 02 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
# NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಸ್ನೇಹಿತರ ದಿನ (Friendship Day) 2026ರಲ್ಲಿ ಆಗಸ್ಟ್ 2ರಂದು (ಆಗಸ್ಟ್ ಮೊದಲ ಭಾನುವಾರ) ಅನೇಕ ದೇಶಗಳಲ್ಲಿ ಸ್ನೇಹಿತರ ದಿನವನ್ನು ಆಚರಿಸಲಾಗುತ್ತದೆ.

2) International Romani Day of Remembrance ? ಹೋಲೋಕಾಸ್ಟ್‌ನಲ್ಲಿ ಜೀವ ಕಳೆದುಕೊಂಡ ರೋಮಾ ಮತ್ತು ಸಿಂಟಿ ಸಮುದಾಯದವರನ್ನು ಸ್ಮರಿಸುವ ಅಂತರರಾಷ್ಟ್ರೀಯ ಸ್ಮರಣಾ ದಿನ.

3) ರಾಷ್ಟ್ರೀಯ ಐಸ್ ಕ್ರೀಮ್ ಸ್ಯಾಂಡ್‌ವಿಚ್ ದಿನ (ಅಮೆರಿಕ) ಐಸ್ ಕ್ರೀಮ್ ಸ್ಯಾಂಡ್‌ವಿಚ್ ಸಿಹಿತಿಂಡಿಯನ್ನು ಆಚರಿಸುವ ದಿನ.

4) ರಾಷ್ಟ್ರೀಯ ಬಣ್ಣ ಹಚ್ಚುವ ಪುಸ್ತಕ ದಿನ (National Coloring Book Day ಅಮೆರಿಕ) ಮಕ್ಕಳಿಗೂ, ವಯಸ್ಕರಿಗೂ ಸೃಜನಶೀಲತೆ ಮತ್ತು ಮನರಂಜನೆಯನ್ನು ಉತ್ತೇಜಿಸುವ ದಿನ.

## ಸುಭಾಷಿತ

ಮನಸ್ಸಿನ ವಿಕಾಸವು ಮಾನವನ
ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.

–ಡಾ. ಬಿ.ಆರ್.ಅಂಬೇಡ್ಕರ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ.ರವಿ ಕುಮಾರ್.ಕೆ

### ವಿದ್ಯಾರ್ಥಿಗಳಲ್ಲಿ ವೃತ್ತಿಪರ ಜ್ಞಾನ ವೃದ್ಧಿಗೆ ಸನ್ ರೈಸ್ ವಿದ್ಯಾಸಂಸ್ಥೆಯ ಮತ್ತೊಂದು ಮಹತ್ವದ ಹೆಜ್ಜೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು, ಸಿಂಧನೂರು ವತಿಯಿಂದ ಪ್ರತೀ ಶನಿವಾರದಂತೆ ಆಯೋಜಿಸಲಾಗುವ ವಿಶೇಷ ಉಪನ್ಯಾಸಗಳ ಸರಣಿಯಲ್ಲಿ ಈ ಶನಿವಾರವೂ ಅರ್ಥಪೂರ್ಣ ಹಾಗೂ ಜ್ಞಾನವರ್ಧಕ ಕಾರ್ಯಕ್ರಮ ನಡೆಯಿತು.**

ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಆಯೋಜಿಸಲಾದ ಈ ವಾರದ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಸಿಂಧನೂ–ರಿನ ಸಂಜೀವಿನಿ ಆಸ್ಪತ್ರೆಯ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ರವಿ ಕುಮಾರ್ ಕೆ (MBBS, MS ? General & Laparoscopic Surgeon) ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ವಿಶೇಷ ಉಪನ್ಯಾಸ ನೀಡಿದರು.ಈ ಸಂದರ್ಭದಲ್ಲಿ "ನಿಷ್ಕ್ರಿಯೀಕರಣ (Sterilization) ವೈದ್ಯಕೀಯ ಹಾಗೂ ನರ್ಸಿಂಗ್ ಶಿಕ್ಷಣದಲ್ಲಿ ಅದರ ಮಹತ್ವ" ಎಂಬ ವಿಷಯದ ಕುರಿತು ಅವರು ಸಮಗ್ರವಾಗಿ ವಿವರಿಸಿದರು.

ಆಸ್ಪತ್ರೆಗಳು, ಶಸ್ತ್ರಚಿಕಿತ್ಸಾ ಕೊಠಡಿಗಳು ಹಾಗೂ ಆರೋಗ್ಯ ಸೇವಾ ಕೇಂದ್ರಗಳಲ್ಲಿ ಸೋಂಕು ನಿಯಂತ್ರಣಕ್ಕಾಗಿ ನಿಷ್ಕ್ರಿಯೀಕರಣದ ಅಗತ್ಯತೆ, ವೈದ್ಯಕೀಯ ಉಪಕರಣಗಳನ್ನು ವೈಜ್ಞಾನಿಕ ರೀತಿಯಲ್ಲಿ ಸ್ವಚ್ಛಗೊಳಿಸಿ ಸುರಕ್ಷಿತವಾಗಿ ಬಳಸುವ ವಿಧಾನಗಳು, ಆರೋಗ್ಯ ಸಿಬ್ಬಂದಿಯ ಜವಾಬ್ದಾರಿಗಳು ಹಾಗೂ ರೋಗಿಗಳ ಸುರಕ್ಷತೆಯಲ್ಲಿ ನರ್ಸಿಂಗ್ ಸಿಬ್ಬಂದಿಯ ಪಾತ್ರದ ಕುರಿತು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥ–ವಾಗುವ ರೀತಿಯಲ್ಲಿ ಮಾಹಿತಿ ನೀಡಿದರು. ಉಪನ್ಯಾಸದ ವೇಳೆ ಅವರು ನರ್ಸಿಂಗ್ ವೃತ್ತಿಯ ಮಹತ್ವ, ಸೇವಾ ಮನೋಭಾವ, ಶಿಸ್ತು, ಸಮಯಪ್ರಜ್ಞೆ, ನೈತಿಕತೆ ಹಾಗೂ ನಿರಂತರ ಅಧ್ಯಯನದ ಅಗತ್ಯತೆಯನ್ನು ಒತ್ತಿ ಹೇಳಿದರು.

ಉತ್ತಮ ನರ್ಸ್‌ಗಳು ವೈದ್ಯಕೀಯ ಕ್ಷೇತ್ರದ ಬೆನ್ನೆಲುಬಾಗಿದ್ದು, ಅವರ ಸೇವೆ





ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಆತ್ಮವಿಶ್ವಾಸ, ಪರಿಶ್ರಮ ಮತ್ತು ಮಾನವೀಯ ಮೌಲ್ಯಗಳು ಅತ್ಯಗತ್ಯವೆಂದು ತಿಳಿಸಿ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ಸಂದೇಶ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಲಾಜರ್ ಸಿರಿಲ್ ಅವರು, ತಮ್ಮ ಅತ್ಯಂತ ಬಿಡುವಿಲ್ಲದ ವೇಳಾಪಟ್ಟಿಯ ನಡುವೆಯೂ ವಿದ್ಯಾರ್ಥಿಗಳಿಗಾಗಿ ಆಗಮಿಸಿ ಜ್ಞಾನಪೂರ್ಣ ಉಪನ್ಯಾಸ ನೀಡಿದ ಡಾ. ರವಿ ಕುಮಾರ್ ಕೆ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಇಂತಹ ವಿಶೇಷ ಉಪನ್ಯಾಸಗಳು ವಿದ್ಯಾರ್ಥಿಗಳ ವೃತ್ತಿಪರ ಜ್ಞಾನ, ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಸನ್ ರೈಸ್ ವಿದ್ಯಾಸಂಸ್ಥೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸದಾ ಬದ್ಧವಾಗಿದೆ ಎಂದು ಹೇಳಿದರು.ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ, ಕಾರ್ಯದರ್ಶಿ ಇರ್ಷಾದ್ ಕೆ, ಹಾಗೂ ಎಲ್ಲಾ ವಿಭಾಗಗಳ ಪ್ರಾಚಾರ್ಯರು ಮತ್ತು ಉಪನ್ಯಾಸಕರ ಪರವಾಗಿ ಡಾ. ರವಿ ಕುಮಾರ್ ಎನ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ, ಸಂಜೀವಿನಿ ಆಸ್ಪತ್ರೆಯ ಸಿಬ್ಬಂದಿ ಸೈಯದ್ ಆಫ್ರಿದಿ, ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಲಾಜರ್ ಸಿರಿಲ್, ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ವಾಸಿಂ ಹುಸೇನ್, ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಿ. ಚಕ್ರವರ್ತಿ, ಉಪನ್ಯಾಸಕರಾದ ರಾಜೇಶ್, ಅಶು ಪಾಷಾ, ಸಂತೋಷಿ, ಸುಧಾ, ವೀರೇಶ್, ಶೋಭಾ, ಚೈತ್ರ, ದಿಲೀಪ್, ಸಾಗರ್, ಹರ್ಷಿತ, ಸನಾ, ಸುರೇಶ್ ಯಾದವ್ ಸೇರಿದಂತೆ ಎಲ್ಲಾ ವಿಭಾಗಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ನೂರಾರು ವಿದ್ಯಾರ್ಥಿಗಳು ಉಪಸ್ಥಿತ–ರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರತಿ ಶನಿವಾರವೂ ವಿವಿಧ ಕ್ಷೇತ್ರಗಳ ಪರಿಣಿತ ವೈದ್ಯರು ಹಾಗೂ ತಜ್ಞರನ್ನು ಆಹ್ವಾನಿಸಿ ವಿದ್ಯಾರ್ಥಿಗಳಿಗೆ ಸಮಕಾಲೀನ ವೈದ್ಯಕೀಯ ಜ್ಞಾನ, ವೃತ್ತಿಪರ ಕೌಶಲ್ಯ ಹಾಗೂ ಜೀವನ ಮೌಲ್ಯಗಳನ್ನು ಪರಿಚಯಿಸುವ







ಸನ್ ರೈಸ್ ವಿದ್ಯಾಸಂಸ್ಥೆಯ ಈ ವಿಶೇಷ ಉಪನ್ಯಾಸ ಸರಣಿ ವಿದ್ಯಾರ್ಥಿಗಳಿಂದ ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದ್ದು, ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆಯ ಗುಣಮಟ್ಟದ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

## ಒಳಮೀಸಲಾತಿಯ ಹೊಸ ಅಧಿಸೂಚನೆ ಹೊರಡಿಸಿ ಟೆಂಡರ್– ಕಂ–ಬಹಿರಂಗ ಹರಾಜು ರದ್ದುಪಡಿಸುವಂತೆ : ಅಂಬೇಡ್ಕರ್ ಸೇನೆ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಲಿಂಗಸಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿರುವ 17 ವಾಣಿಜ್ಯ ನಿವೇಶನಗಳ ಹಂಚಿಕೆಗಾಗಿ ನಿಮ್ಮಿಂದ ದಿನಾಂಕ 27–07–2026 ರಂದು ಹೊರಡಿಸಲಾದ ಟೆಂಡರ್–ಕಂ–ಬಹಿರಂಗ ಹರಾಜು ಅಧಿಸೂಚನೆಯನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ.**

ಈ ಅಧಿಸೂಚನೆಯಲ್ಲಿ ಕರ್ನಾಟಕ ಸರ್ಕಾರವು ಅನುಸೂಚಿತ ಜಾತಿ (SC) ಮತ್ತು ಅನುಸೂಚಿತ ಪಂಗಡ (ST) ಸಮುದಾಯಗಳಿಗೆ ನೀಡಿರುವ ಸಾಂವಿಧಾನಿಕ ಒಳಮೀಸಲಾತಿ ಹಕ್ಕನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದೆ. ಒಳಮೀಸಲಾತಿಯ ಹೊಸ ಅಧಿಸೂಚನೆ ಹೊರಡಿಸಿ ಟೆಂಡರ್–ಕಂ–ಬಹಿರಂಗ ಹರಾಜು ರದ್ದುಪಡಿಸುವಂತೆ ಅಂಬೇಡ್ಕರ್ ಸೇನೆಯ ತಾಲೂಕ ಅಧ್ಯಕ್ಷ ಗದೆಪ್ಪ ಚಿತ್ತಾಪುರ ಸಹಾಯಕ ಕೃಷಿ



ನಿರ್ದೇಶಕರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಇವರಿಗೆ ಮನವಿಯನ್ನು ಸಲ್ಲಿಸಿದರು.

ಯಾವ ನಿವೇಶನ ಎಷ್ಟು ಶೇಕಡಾ ಖಅ/ಖಖಿ ಗೆ ಮೀಸಲು, ಯಾವ ನಿಯಮದಡಿ ಎಂಬ ಸ್ಪಷ್ಟ ವಿವರ ನೀಡದೆ ಕೇವಲ ಪ.ಜಾತಿಗೆ/ಪ.ಪಂಗಡಕ್ಕೆ ಎಂದು ಮಾತ್ರ ನಮೂದಿಸಲಾಗಿದೆ. ಇದು ಸಾಮಾಜಿ–ಕ ನ್ಯಾಯದ ತತ್ವಕ್ಕೆ ವಿರುದ್ಧವಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ರವರ ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು. ನಿಗದಿತ ಸಮಯದಲ್ಲಿ ಕ್ರಮ ಕೈಗೊಳ್ಳದಿದ್ದಲ್ಲಿ, ಮುಂದಿನ ದಿನಗಳಲ್ಲಿ ಕಾನೂನಾತ್ಮಕ ಹೋರಾಟ ಹಾಗೂ ತಮ್ಮ ಕಚೇ–ರಿಯ ಮುಂದೆ ಸಾರ್ವಜನಿಕ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ– ಎಂದು ಒತ್ತಾಯಿಸಿದರು .

ಈ ಸಂದರ್ಭದಲ್ಲಿ ಅಮರೇಶ ಹೆಚ್ ಆನೆಹೊಸೂರು ಅಂಬೇಡ್ಕರ್ ಸೇನೆ ಪ್ರದಾನ ಕಾರ್ಯದರ್ಶಿ , ಅನಿಲ್ ಕುಮಾರ್ , ನಾಗರಾಜ್ ಚಲುವಾದಿ ಸೇರಿದಂತೆ ಇತರರು ಇದ್ದರು .

## ಆಗಸ್ಟ್ 23ಕ್ಕೆ ಬಲಗೈ ಜಾತಿಗಳ ಒಕ್ಕೂಟದಿಂದ ಪ್ರತಿಭಾ ಪುರಸ್ಕಾರ.

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಬಡ ಮತ್ತು ಮಧ್ಯಮ ವರ್ಗದವರ ಮಕ್ಕಳಿಗೆ ಶೈಕ್ಷಣಿಕ ಭವಿಷ್ಯ ರೂಪಿಸಿಕೊಳ್ಳಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಅಧ್ಯಕ್ಷರಾದ ವೀರೇಶ ಹಂಚಿನಾಳ ತಿಳಿಸಿದರು.**

ನಗರದ ಪತ್ರಿಕಾ ಭವನದಲ್ಲಿ ಆಗಸ್ಟ್ 01 ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಆಗಸ್ಟ್ 23 ರಂದು 2025–26ನೇ ಸಾಲಿನ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.70ರಷ್ಟು ಅಂಕಗಳು ಪಡೆದ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ವಿದ್ಯಾರ್ಥಿಗಳಿಗೆ ರಾಯಚೂರಿನ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದ್ದು,




ವಿಧ್ಯಾರ್ಥಿ ವಿದ್ಯಾರ್ಥಿನಿಯರು ಶಾಲಾ ಕಾಲೇಜು ಪ್ರಾಂಶುಪಾಲರಿಂದ ಪಡೆದ ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ 16–08–2026ರ ಅವಧಿಯ ಒಳಗಾಗಿ ವೀರೇಶ ಹಂಚಿನಾಳ ಮೊಬೈಲ್ ನಂ–8150978739, ವಿರುಪಣ್ಣ ಬೂದಿವಾಳ –9740420855 ಇವರನ್ನು ಸಂಪರ್ಕಿಸಿ ಹೆಸರು ನೊಂದಾಯಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ: ಸಮಾಜದ ಹಿರಿಯ ಮುಖಂಡರಾದ ನರಸಪ್ಪ ಕಟ್ಟಿಮನಿ, ಹನುಮಂತಪ್ಪ ಗೋಮರ್ಸಿ, ಶರಣಪ್ಪ ಸೋಮನಾಳ, ಮೌಲಪ್ಪ ವಕೀಲರು, ಹುಸೇನಪ್ಪ ರಾಗಲಪರ್ವಿ, ರಾಜ ಉದ್ಬಾಳ, ವಿರುಪಣ್ಣ ಬೂದಿವಾಳ, ಪಂಪಾಪತಿ ಏಳುರಾಗಿ ಕ್ಯಾಂಪ್, ದುರುಗಪ್ಪ, ಸೇ–ರಿದಂತೆ ಇನ್ನಿತರರು ಇದ್ದರು.

## ಸನ್ ರೈಸ್ ಕಾಲೇಜಿನಲ್ಲಿ ಅರ್ಥಪೂರ್ಣ 'ವ್ಯಸನಮುಕ್ತ ದಿನ' ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಸನ್ ರೈಸ್ ಡಿ–ಫಾರ್ಮಸಿ, ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಇಂದು 'ವ್ಯಸನಮುಕ್ತ ದಿನ'ವನ್ನು ಅತ್ಯಂತ ಸಡಗರ ಹಾಗೂ ಅರ್ಥ–ಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಪಾಲ್ಗೊಂಡು ವ್ಯಸನಮುಕ್ತ ಸಮಾಜ ನಿರ್ಮಾಣದ ಸಂದೇಶ ಸಾರಿದರು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿಂಧನೂರಿನ ಪ್ರಖ್ಯಾತ ವೈದ್ಯರಾದ ಡಾ. ರವಿ ಕುಮಾರ್ ಕೆ ಅವರು ಆಗಮಿಸಿದ್ದರು ಗಿಡಕ್ಕೆ ನೀರನ್ನು ಹಾಕುವ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಬಳಿಕ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅವರು, "ಯುವ ಜನತೆ ದೇಶದ ಪ್ರಮುಖ ಆಸ್ತಿ. ಆದ–ರೆ ಇಂದಿನ ಯುವ ಸಮೂಹವು ಮಾದಕ ವಸ್ತುಗಳು ಮತ್ತು ವಿವಿಧ ವ್ಯಸನಗಳಿಗೆ ಬಲಿಯಾಗುತ್ತಿರುವುದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ.

ಆರೋಗ್ಯಕರ ಸಮಾಜದ ನಿರ್ಮಾಣ–ಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಯೂ ವ್ಯಸನಗಳಿಂದ ದೂರವಿರಬೇಕು. ನಮ್ಮ ಕಾಲೇಜು ಕೇವಲ ಶೈಕ್ಷಣಿಕ ಜ್ಞಾನ ನೀಡುವುದಷ್ಟೇ ಅಲ್ಲ, ಉತ್ತಮ ಸಂಸ್ಕಾರ ಮತ್ತು ಆರೋಗ್ಯಕರ ಜೀವನಶೈಲಿಯನ್ನು ರೂಢಿಸುವ ನಿಟ್ಟಿನಲ್ಲಿ ಇಂತಹ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ" ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಖ್ಯಾತ ವೈದ್ಯರಾದ ಡಾ. ರವಿ ಕುಮಾರ್ ಕೆ ಅವರು ಮಾತನಾಡಿ, "ವ್ಯಸನಗಳು ಮನುಷ್ಯನ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸಂಪೂರ್ಣವಾಗಿ ಬುಡಮೇಲುಗೊಳಿಸುತ್ತವೆ. ಧೂಮಪಾನ, ಮದ್ಯಪಾನ




ಮತ್ತು ಇತರೆ ಮಾದಕ ವಸ್ತುಗಳ ಸೇವನೆಯಿಂದ ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಗಳು ತುತ್ತಾಗುವ ಅಪಾಯವಿರುತ್ತದೆ. ವೈದ್ಯಕೀಯ ಮತ್ತು ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಾದ ನೀವು ಸಮಾಜಕ್ಕೆ ಮಾದರಿಯಾಗಿರಬೇಕು. ವ್ಯಸನಗಳ ದುಷ್ಪರಿಣಾಮಗಳ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ದೊಡ್ಡ ಜವಾಬ್ದಾರಿ ನಿಮ್ಮ ಮೇಲಿದೆ" ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ನರ್ಸಿಂಗ್ ವಿಭಾಗದ ಪ್ರಾಂಶುಪಾಲರಾದ ಲಾಜರ್ ಸಿರಿಲ್ ಅವರು, "ಮುಂದಿನ ದಿನಗಳಲ್ಲಿ ಸಮಾಜದ ಆರೋಗ್ಯ ರಕ್ಷಕರಾಗಲಿರುವ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳು ಮೊದಲು ಉತ್ತಮ ಆರೋಗ್ಯದ ಮಹತ್ವವನ್ನು ಅರಿಯಬೇಕು.

ವ್ಯಸನಮುಕ್ತ ಬದುಕಿನಿಂದ ಮಾತ್ರ ಸುಂದರ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನದಲ್ಲಿ ಕೇವಲ ರೋಗಿಗಳ ಚಿಕಿತ್ಸೆಗೆ ಸೀಮಿತವಾಗದೆ, ಸಮಾಜವನ್ನು ವ್ಯಸನ ಮುಕ್ತಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು" ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸನ್ ರೈಸ್ ಕಾಲೇಜಿನ ಎಲ್ಲಾ ವಿಭಾಗಗಳ ಉಪನ್ಯಾಸಕರು ಹಾಗೂ ನರ್ಸಿಂಗ್, ಡಿ–ಫಾರ್ಮಸಿ ಮತ್ತು ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ, ವ್ಯಸನಮುಕ್ತ ಸಮಾಜ ನಿರ್ಮಿಸುವ ಪ್ರತಿಜ್ಞೆಗೈದರು.

## ಸಾಹಿತ್ಯ ಸಿಂಚನ

### ಆಶೆಯ ಅಲೆಗಳು

ಆಶೆಯ ಅಲೆಗಳು ಮನದಲಿ ಮೂಡಲಿ,
ಕತ್ತಲ ದಾರಿಗೂ ಬೆಳಕು ನೀಡಲಿ.
ಸೋಲಿನ ಕ್ಷಣಗಳು ಬಂದರೂ ಏನು,
ಗೆಲುವಿನ ಹೆಜ್ಜೆಗೆ ದಾರಿ ತೋರಲಿ.

ಕನಸುಗಳ ಸಾಗರ ವಿಶಾಲವಾದರೂ,
ಧೈರ್ಯದ ದೋಣಿ ಮುಂದೆ ಸಾಗಲಿ.
ಬಿರುಗಾಳಿ ಎಷ್ಟೇ ಬೀಸಿದರೂ,
ಆಶೆಯ ದೀಪ ಎಂದೂ ಆರದಿರಲಿ.

ಪ್ರತಿ ಪ್ರಭಾತ ಹೊಸ ಸಂದೇಶ,
ಹೊಸ ಕನಸಿಗೆ ಹೊಸದೇ ಪ್ರವೇಶ.
ನಗುವಿನ ಹೂವು ಅರಳುವ ದಿನ,
ಆಶೆಯಲಿ ತುಂಬಿರಲಿ ಜೀವನ.

ಮೇಘಗಳ ಹಿಂದೆ ಸೂರ್ಯನ ನಗು,
ಮನದೊಳಗಿರಲಿ ವಿಶ್ವಾಸದ ಬುಗು.
ಪ್ರಯತ್ನವೇ ಯಶಸ್ಸಿನ ಮೆಟ್ಟಿಲು,
ಆಶೆಯೇ ಬದುಕಿನ ನಿಜ ಬೆಳಕು.

ಮುಂದೆ ಸಾಗುವ ಮನದ ಬಲವೇ,
ಭವಿಷ್ಯದ ಕನಸಿನ ಸೊಬಗೇ.
ಆಶೆಯ ಅಲೆಗಳು ಎದ್ದೇಳುವಾಗ,
ಜೀವನವೇ ಸಂತಸದ ಸಾಗರವಾಗ

## ಸಿಂಧನೂರು ಮುರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳ ಆರೋಗ್ಯ ಸುರಕ್ಷತೆಗಾಗಿ ಸಮರೋಪಾದಿಯಲ್ಲಿ ನಿಗಾವಣೆ:

❑ ನೈಜ್ಯ ದೆಸೆ ನ್ಯೂಸ್

**ಬೆಳಗಿನ ಉಪಹಾರ ಸೇವಿಸಿದ ಬಳಿಕ ವಿದ್ಯಾರ್ಥಿಗಳ ಆರೋಗ್ಯದಲ್ಲಿ ಅಸ್ವಸ್ಥತೆ ಕಂಡುಬಂದ ಸಿಂಧನೂರು ನಗರದ ಗೋಮರ್ಸಿ ಹತ್ತಿರದ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಎಲ್ಲ ಮಕ್ಕಳು ಆರೋಗ್ಯವಾಗಿದ್ದು, ನಿರಂತರ ನಿಗಾವಹಿಸಿ ತಾತ್ಕಾಲಿಕವಾಗಿ ರಾತ್ರಿ ಪಾಳಯದಲ್ಲಿ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಂದಿತಾ ಎಮ್ ಎನ್ ತಿಳಿಸಿದರು.**

ಆಹಾರ ಸೇವನೆಯ ನಂತರ ವಿದ್ಯಾರ್ಥಿಗಳು ವಾಂತಿ ಸುಸ್ತು, ಕುರಿತು ಮಾಹಿತಿ ಬಂದ ತಕ್ಷಣವೇ ಪಿಡಬ್ಲ್ಯುಡಿ ಕ್ಯಾಂಪ್‌ನಲ್ಲಿರುವ ತಾಯಿ ಮಕ್ಕಳ ಆಸ್ಪತ್ರೆಗೆ ಮಕ್ಕಳನ್ನು ದಾಖಲಿಸಿ ತಾಲೂಕು ಆರೋಗ್ಯ ಅಧಿಕಾರಿ ಡಾ ಅಯ್ಯನಗೌಡ ಹಾಗೂ ಆಡಳಿತ ವೈದ್ಯಾಧಿಕಾರಿ ಡಾ ಕಾವೇರಿ ನೇತೃತ್ವದಲ್ಲಿ ಚಿಕಿತ್ಸೆ ನೀಡಲಾಗಿದ್ದು, ಚಿಕಿತ್ಸೆಗೊಳಗಾದ ಎಲ್ಲ 48 ಮಕ್ಕಳು ಯಾವುದೇ ಅಪಾಯವಿಲ್ಲದೆ ಸುರಕ್ಷಿತವಾಗಿದ್ದು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ. ವಸತಿ ನಿಲಯಕ್ಕೆ ಬೇಟಿ ನೀಡಿ



ಆಹಾರದ ಪದಾರ್ಥಗಳ ತಯಾರಿಕೆಯಲ್ಲಿ ಸ್ವಚ್ಛತೆ, ಅಡುಗೆ ಮನೆಯ ಶುಚಿತ್ವ, ಕುರಿತು ಎಲ್ಲಾ ಅಡುಗೆ ಸಿಬ್ಬಂದಿಯವರಿಗೆ ಸೂಚಿಸಿದರು.

ವೈದ್ಯರಿಂದ ಮಕ್ಕಳ ತಪಾಸಣೆ ಆರ್‌ಬಿಎಸ್‌ಕೆ ಹಾಗೂ ಆರ್‌ಕೆ–ಎಸ್‌ಕೆ ವೈದ್ಯರ ತಂಡವು ಎಲ್ಲ ಮಕ್ಕಳ ಆರೋಗ್ಯವನ್ನು ತಪಾಸಣೆ ಮಾಡಿದರು. ಮಕ್ಕಳಿಗೆ ಆರೋಗ್ಯ ಶಿಕ್ಷಣ ತಾಲೂಕ ಆರೋಗ್ಯ ಅಧಿಕಾರಿಗಳ ನೇತೃತ್ವದಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರದ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ, ಗೀತಾ ಹೀರೆಮಠ ಪ್ರತಿ ತರಗತಿಗೂ ತೆರಳಿ ಕೈ ತೊಳೆಯುವ ವಿಧಾನ, ವಾಂತಿ ಬೇದಿ ತಡೆಯುವಿಕೆ, ಆಹಾರ ಪದಾರ್ಥಗಳ ಮಹತ್ವ,

ಯಾವುದೇ ಕಾರಣಕ್ಕೂ ಶುದ್ಧೀಕರಿಸದೆ ಇರುವ ಅಥವಾ ಕೆರೆಕುಂಟೆಗಳ ನೀರನ್ನು ನೇರವಾಗಿ ಕುಡಿಯಬೇಡಿ ಕೈಗಳನ್ನು ತೊಳೆಯದುಕೊಳ್ಳದೆ ಆಹಾರ ಸೇವಿಸಬೇಡಿ, ನೀರಿನ ಸಂಗ್ರಹಣಗಳ ಮೇಲೆ ಮುಚ್ಚಳ ಮುಚ್ಚದೆ ಬಿಡಬೇಡಿ, ಬಯಲುಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡಬೇಡಿ, ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಮತ್ತು ಕತ್ತರಿಸಿ ಇಟ್ಟ ಹಣ್ಣುಗಳನ್ನು ತಿನ್ನಬೇಡಿ, ತಯಾರಿಸಿದ ಆಹಾರವನ್ನು ಮುಚ್ಚಳ ಮುಚ್ಚದಂತೆ ಇಡಬೇಡಿ, ಶುದ್ಧೀಕರಿಸಿದ ನೀರನ್ನು ಅಥವಾ ನೀರು ಶುದ್ಧೀಕರಣ ಘಟಕದ ನೀರನ್ನು ಕುಡಿಯಲು ಬಳಸಲು, ಓ ಆರ್ ಎಸ್ ದ್ರಾವಣ ತಯಾರಿಸಿದ ನಂತರ 24 ಗಂಟೆಯೊಳಗೆ ಬಳಸಿ ವಾಂತಿಭೇದಿಯಾದಾಗ ಮನೆಯಲ್ಲಿ ಗಂಜಿ ಬೇಳೆ ತಿಳಿಸಾರು ನಿಂಬೆ ಪಾನಕ ಎಳನೀರು ಕುಡಿಯುವುದನ್ನು ಮುಂದುವರೆಸುವ ಕುರಿತು ಜಾಗೃತಿ ನೀಡಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಹೆಚ್‌ಐಓ ಸುಗುರಪ್ಪ, ಎಪಡಮಲಾಜಿಷ್ಟ್ ಶ್ರೀನಿವಾಸ್, ಹಿರಿಯ ಹೆಚ್‌ಐಓ, ರಂಗನಾಥ್ ಗುಡಿ, ಸಂಗನಗೌಡ ಪಾಟೀಲ್, ತಾಲೂಕು ಎಫಿಡಾಮಲೋಜಿಸ್ಟ್, ನಿಖಿಲ್, ಎಮ್‌ಟಿಎಸ್ ಎಫ್ ಎ ಹಣಗಿ, ಪಿಹೆಚ್‌ಸಿಓ ಅನ್ನಪೂರ್ಣ, ಗಂಗಮ್ಮ, ಹನುಮಂತಮ್ಮ ಹೆಚ್‌ಐಓ ರವಿರಾಜ್, ಸಿಹೆಚ್‌ಓ ಚಂದ್ರಶೇಖರ್, ಅಂದಾನಪ್ಪ ಹಾಗೂ ವಸತಿ ಶಾಲೆಯ ಶಿಕ್ಷಕರು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

### ಚಿಂಚೋಡಿ ಸಮೀಪದ ಬಸಾಪುರದ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಕಳವು: 70 ಸಾವಿರ ಮೌಲ್ಯದ ಚಿನ್ನ–ಬೆಳ್ಳಿ ಆಭರಣಗಳು ಕಳವು

## ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು



❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ತಾಲೂಕಿನ ಚಿಂಚೋಡಿ ಸಮೀಪದ ಬಸಾಪುರ ಗ್ರಾಮದ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಅಪರಿಚಿತ ಕಳ್ಳರು ದೇವಿಯ ಚಿನ್ನ ಹಾಗೂ ಬೆಳ್ಳಿಯ ಆಭರಣಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಸಂಬಂಧ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.**

ದೇವಸ್ಥಾನದ ಪೂಜಾರಿ ಯಂಕೋಬ ತೋಟದ (51) ಅವರು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಘಟನೆಯ ವಿವರಕಳೆದ 25 ವರ್ಷಗಳಿಂದ ದೇವಸ್ಥಾನದಲ್ಲಿ ಪೂಜಾರಿಯಾಗಿ ಸೇವೆ ಸಲ್ಲಿಸುತ್ತಿರುವ ಯಂಕೋಬ ತೋಟದ ಅವರು ಜುಲೈ 29ರಂದು ಬೆಳಿಗ್ಗೆ ಪೂಜೆ ಮುಗಿಸಿ ದೇವಸ್ಥಾನಕ್ಕೆ ಬೀಗ ಹಾಕಿ ಮನೆಗೆ ತೆರಳಿದ್ದರು. ಜುಲೈ 30ರಂದು ಬೆಳಿಗ್ಗೆ ದೇವಸ್ಥಾನಕ್ಕೆ ಬಂದಾಗ ಗರ್ಭಗುಡಿಯಲ್ಲಿದ್ದ ದೇವಿಯ ಚಿನ್ನ ಹಾಗೂ ಬೆಳ್ಳಿಯ ಆಭರಣಗಳು ಕಳುವಾಗಿರುವುದು ಗಮನಕ್ಕೆ ಬಂದಿದೆ.

ಜುಲೈ 29ರ ರಾತ್ರಿ 11:30ರಿಂದ ಜುಲೈ 30ರ ಬೆಳಿಗ್ಗೆ 6:00 ಗಂಟೆಯ ನಡುವಿನ ಅವಧಿಯಲ್ಲಿ ಅಪರಿಚಿತರು ದೇವಸ್ಥಾನಕ್ಕೆ ನುಗ್ಗಿ ಕಳವು ನಡೆಸಿರುವ ಶಂಕೆ ವ್ಯಕ್ತವಾಗಿದೆ.

ಕಳುವಾದ ಆಭರಣಗಳ ವಿವರ

– ತಾಳಿ ಬೊಟ್ಟು (2 ಗ್ರಾಂ) ? ?8,000
– ಬೆಳ್ಳಿಯ ಕಡಗ (25 ತೊಲೆ) ? ?17,500
– ಬೆಳ್ಳಿಯ ರೂಳಿ (20 ತೊಲೆ) ? ?14,000
– ಬೆಳ್ಳಿಯ ಕಾಲಿನ ಗೆಜ್ಜೆ (8 ತೊಲೆ) ? ?5,600
– ಬೆಳ್ಳಿಯ ಪ್ಯಾಟಿ ಗೆಜ್ಜೆ (7 ತೊಲೆ) ? ?4,900
–ಬಂಗಾರದ ಮೂಗಿನ ನತ್ತು (5 ಗ್ರಾಂ) ? ?20,000

ಒಟ್ಟು ಅಂದಾಜು ಮೌಲ್ಯ: ?70,000/–

ಘಟನೆಯ ಕುರಿತು ಮಾಹಿತಿ ಪಡೆದ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಆಗಿರುವ ವೈಶಾಲಿ ಜಳಕಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕಳ್ಳರ ಪತ್ತೆಗೆ ತನಿಖೆ ಮುಂದುವರಿಸಿದ್ದಾರೆ. ಈ ಕುರಿತು ವರದಿಗಾರರೊಂದಿಗೆ ಮಾತನಾಡಿದ ದೇವಸ್ಥಾನದ ಪೂಜಾರಿ ಯಂಕೋಬ ತೋಟದ ಅವರು, ದೇವಸ್ಥಾನದ ಆಭರಣಗಳನ್ನು ಕಳವು ಮಾಡಿದ ಆರೋಪಿಗಳನ್ನು ಶೀಘ್ರ ಪತ್ತೆಹಚ್ಚಿ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

### ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಿ: ತಹಶೀಲ್ದಾರ್ ಭೀಮರಾಯ ರಾಮಸಮುದ್ರ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಸರ್ವೋದಯ ಸಮೂಹ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ಸರ್ವೋದಯ ಸಮೂಹ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಶ್ರೀ ಡಾ. ಮಹಾಂತ್ ಶಿವಾಯೋಗಿ ಸ್ವಾಮೀಜಿಯವರ ಜನ್ಮದಿನದ ಅಂಗವಾಗಿ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮ ನಡೆಯಿತು. ತಹಶೀಲ್ದಾರ್ ಭೀಮರಾಯ ರಾಮಸಮುದ್ರ ಅವರು ಡಾ. ಮಹಾಂತ್ ಶಿವಾಯೋಗಿ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.**



ಸಮಾಜವನ್ನು ವ್ಯಸನಮುಕ್ತಗೊಳಿಸುವ ಉದ್ದೇಶದಿಂದ ಸ್ವಾಮೀಜಿಯವರು ಮನೆ ಮನೆಗೆ ತೆರಳಿ 'ಮಹಾಂತ ಜೋಳಿಗೆ' ಮೂಲಕ ಜನರ ದುಶ್ಚಟಗಳನ್ನು ತ್ಯಜಿಸುವಂತೆ ಜಾಗೃತಿ ಮೂಡಿಸಿದ ಸೇವೆ ಅನನ್ಯವಾಗಿದೆ. ಅವರ ಸಮಾಜಮುಖಿ ಕಾರ್ಯವನ್ನು ಗೌರವಿಸಿ ರಾಜ್ಯ ಸರ್ಕಾರವು ಪ್ರತಿವರ್ಷ ಅವರ ಜನ್ಮದಿನವನ್ನು ವ್ಯಸನಮುಕ್ತ ದಿನಾಚರಣೆಯಾಗಿ ಆಚರಿಸುತ್ತಿದೆ ಎಂದು ತಿಳಿಸಿದರು. ಇಂದಿನ ಯುವಕರು ಮತ್ತು ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗಿ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಬಡ ಹಾಗೂ ಕೆಳವರ್ಗದ ಜನರು ವ್ಯಸನಗಳಿಗೆ ಬಲಿಯಾಗುತ್ತಿರುವುದರಿಂದ ಅವರ ಕುಟುಂಬಗಳು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿಯುತ್ತಿವೆ. ಆದ್ದರಿಂದ ಪ್ರತಿಯೊಬ್ಬರೂ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ ಯುವಜನರಲ್ಲಿ ಜಾಗೃತಿ ಮೂಡಿಸಬೇಕೆಂದು ಅವರು ಕರೆ ನೀಡಿದರು. ಇದೇ ವೇಳೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮಾನ್ವಿಯ ಪ್ರಭಾರ ಮುಖ್ಯ ವೈದ್ಯಾಧಿಕಾರಿ ಡಾ. ಶರಣಪ್ಪ ಡಿ. ಅವರು ದುಶ್ಚಟಗಳಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಹಾಗೂ ಅವುಗಳ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸರ್ವೋದಯ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಶಿವಕುಮಾರ್, ಮಾನ್ವಿ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ, ಪಿಎಸ್‌ಐ ಶರಣಪ್ಪ, ತಾಲೂಕು ಪಂಚಾಯತ್ ವ್ಯವಸ್ಥಾಪಕ ಬಸವರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್ ದೊಡ್ಮನಿ, ಅಗ್ನಿಶಾಮಕ ಇಲಾಖೆ ಅಧಿಕಾರಿ ರಂಗಪ್ಪ, ತೋಟಗಾರಿಕೆ ಇಲಾಖೆ ಅಧಿಕಾರಿ ಹನುಮಂತ ಭಜಂತ್ರಿ, ಸರ್ವೋದಯ ಸಿಬಿಎಸ್‌ಇ ಶಾಲೆಯ ಪ್ರಾಚಾರ್ಯ ಜೋಶಫ್, ಸರ್ವೋದಯ ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ನವೀನ್ ಕುಮಾರ್, ಮಾ ಫ್ರೆಂಡ್ಸ್ ಸರ್ವೋದಯ ಸಮೂಹ ಶಿಕ್ಷಣ ಸಂಸ್ಥೆಯ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕಾಮನ್ವೆಲ್ತ್ ಪವರ್ ಲಿಫ್ಟಿಂಗ್ ಚಾಂಪಿಯನ್ಶಿಪ್‌ಗೆ ಭಾರತದಿಂದ ಆಯ್ಕೆಯಾದ ಸಚಿನ್ ತುಕಾರಾಮ್

❑ ನೈಜ್ಯ ದೆಸೆ ನ್ಯೂಸ್

**ವಿಜಯಪುರ: ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ತಿಗಣೆ ಬೀದರೆ ಗ್ರಾಮದ ಹೆಮ್ಮೆಯ ಪುತ್ರರಾದ ಸಚಿನ್ ತುಕಾರಾಮ್ ಸಾಳೋಂಕೆ ಅವರು ಮುಂಬರುವ ಸೆಪ್ಟೆಂಬರ್ 17 ರಿಂದ ಸೆಪ್ಟೆಂಬರ್ 27ರವರೆಗೆ ಕೆನಡಾ ದೇಶದಲ್ಲಿ ಜರುಗಲಿರುವ ಪ್ರತಿಷ್ಠಿತ ಕಾಮನ್ವೆಲ್ತ್ ಪವರ್ ಲಿಫ್ಟಿಂಗ್ ಚಾಂಪಿಯನ್ಶಿಪ್‌ಗೆ (Commonwealth Powerlifting Championship) ಭಾರತ ದೇಶವನ್ನು ಪ್ರತಿನಿಧಿಸಲು ಅಧಿಕೃತವಾಗಿ ಆಯ್ಕೆಯಾಗಿದ್ದಾರೆ.**

ಸಾಮಾನ್ಯ ಗ್ರಾಮೀಣ ಹಿನ್ನೆಲೆಯಿಂದ ಬಂದ ಸಚಿನ್ ಸಾಳೋಂಕೆ ಅವರು ತಮ್ಮ ಅಚಲ ವಿಶ್ವಾಸ, ಕಠಿಣ ಪರಿಶ್ರಮ ಮತ್ತು ಪವರ್ ಲಿಫ್ಟಿಂಗ್ ಕ್ರೀಡೆಯ ಮೇಲಿನ ದೃಢಸಂಕಲ್ಪದಿಂದ ಈ ಮಹತ್ವದ ಮೈಲಿಗಲ್ಲು ತಲುಪಿದ್ದಾರೆ. ಸೌಲಭ್ಯಗಳ ಕೊರತೆಯ ನಡುವೆಯೂ ಸ್ವಂತ ಶ್ರಮದಿಂದ ಅಭ್ಯಾಸ ನಡೆಸಿ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಅವರು ಈ ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಇವರ ಈ ಐತಿಹಾಸಿಕ ಸಾಧನೆಯು ವಿಜಯಪುರ ಜಿಲ್ಲೆಗೆ ಮಾತ್ರವಲ್ಲದೆ ಇಡೀ ಕರ್ನಾಟಕ ರಾಜ್ಯಕ್ಕೆ ಕೀರ್ತಿ ತಂದಿದೆ.






ಕೆನಡಾದಲ್ಲಿ ನಡೆಯುವ ಈ ಬೃಹತ್ ಕಾಮನ್ವೆಲ್ತ್ ಚಾಂಪಿಯನ್ಶಿಪ್‌ನಲ್ಲಿ ವಿಶ್ವದ ವಿವಿಧ ದೇಶಗಳ ಅತ್ಯುನ್ನತ ಪವರ್ ಲಿಫ್ಟರ್‌ಗಳು ತಮ್ಮ ಶಕ್ತಿ ಪ್ರದರ್ಶಿಸಲಿದ್ದಾರೆ. ಭಾರತದ ಪರವಾಗಿ ಕಣಕ್ಕಿಳಿಯಲಿರುವ ಸಚಿನ್ ಸಾಳೋಂಕೆ ಅವರು ದೇಶಕ್ಕೆ ಪದಕ ತಂದುಕೊಡುವ ಮೂಲಕ ರಾಷ್ಟ್ರದ ಧ್ವಜವನ್ನು ಎತ್ತಿಹಿಡಿಯುವ ವಿಶ್ವಾಸದಲ್ಲಿದ್ದಾರೆ. ಸದ್ಯ ಅವರು ಈ ಕ್ರೀಡಾಕೂಟಕ್ಕಾಗಿ ಕಠಿಣ ಅಭ್ಯಾಸ ಹಾಗೂ ತರಬೇತಿಯಲ್ಲಿ ನಿರತರಾಗಿದ್ದಾರೆ.

ಗ್ರಾಮೀಣ ಪ್ರದೇಶದ ಯುವಕನೊಬ್ಬ ಜಾಗತಿಕ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವುದು ತಿಗಣೆ ಬೀದರೆ ಗ್ರಾಮ ಹಾಗೂ ಬಬಲೇಶ್ವರ ತಾಲೂಕಿನಲ್ಲಿ ಹಬ್ಬದ ಸಂಭ್ರಮ ಮೂಡಿಸಿದೆ. ಸ್ಥಳೀಯ ಕ್ರೀಡಾಭಿಮಾನಿಗಳು, ಗ್ರಾಮಸ್ಥರು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಸಚಿನ್ ಸಾಳೋಂಕೆ ಅವರಿಗೆ ಆತ್ಮೀಯ ಅಭಿನಂದನೆಗಳನ್ನು ಸಲ್ಲಿಸಿದ್ದು, ಕೆನಡಾದಲ್ಲಿ ನಡೆಯುವ ಪಂದ್ಯಾವಳಿಯಲ್ಲಿ ಯಶಸ್ಸು ಸಾಧಿಸಿ ದೇಶಕ್ಕೆ ಚಿನ್ನದ ಪದಕ ತರಲಿ ಎಂದು ಹಾರೈಸಿದ್ದಾರೆ. ಅಂತಾರಾಷ್ಟ್ರೀಯ ಕ್ರೀಡಾ ವೇದಿಕೆಯಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಲು ಸಜ್ಜಾಗಿರುವ ಸಚಿನ್ ಸಾಳೋಂಕೆ ಅವರ ಈ ಸ್ಪರ್ಧಾ ಪಯಣ ಯಶಸ್ವಿಯಾಗಲಿ ಎಂದು ನಾಡಿನ ಸಮಸ್ತ ಕ್ರೀಡಾಪ್ರೇಮಿಗಳು ಹಾರೈಸಿದ್ದಾರೆ.

## ಅಂಜುಮನ್–ಎ–ಮುಸ್ಲಿಮೀನ್ ಯರಡೋಣ ಗ್ರಾಮ ಕಮಿಟಿ ರಚನೆ: ಸಮುದಾಯದ ಒಮ್ಮತದ ಮೇರೆಗೆ ನೂತನ ಪದಾಧಿಕಾರಿಗಳ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸೂಗೂರು: ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿ (ರಿ) ಆಶ್ರಯದಲ್ಲಿ ದಿನಾಂಕ 30–07–2026 ರಂದು ಯರಡೋಣ ಗ್ರಾಮದ ಜಾಮಿಯಾ ಮಸೀದಿಯಲ್ಲಿ ಸಮುದಾಯದ ಗುರು–ಹಿರಿಯರು, ಮುಖಂಡರು ಹಾಗೂ ಸದಸ್ಯರ ಸಮ್ಮುಖದಲ್ಲಿ ಮಹತ್ವದ ಸಭೆ ನಡೆಯಿತು. ಸಭೆಯಲ್ಲಿ ಗ್ರಾಮದ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಅಂಜುಮನ್–ಎ–ಮುಸ್ಲಿಮೀನ್ ಯರಡೋಣ ಗ್ರಾಮ ಕಮಿಟಿಯನ್ನು ಸರ್ವಾನುಮತದಿಂದ ರಚಿಸಲಾಯಿತು.**

ಸಭೆಯಲ್ಲಿ ಸಮುದಾಯದ ಹಿರಿಯರು ಹಾಗೂ ಮುಖಂಡರು ಮಾತನಾಡಿ, ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸಂಘಟಿತ ಕಾರ್ಯ ಅತ್ಯಗತ್ಯವಾಗಿದ್ದು, ಯುವಜನರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು, ಧಾರ್ಮಿಕ ಮೌಲ್ಯಗಳೊಂದಿಗೆ ಸಾಮಾಜಿಕ ಸೇವೆಗಳನ್ನು ವಿಸ್ತರಿಸುವುದು ಹಾಗೂ ಸಮಾಜದಲ್ಲಿ



ಸೌಹಾರ್ದತೆ ಮತ್ತು ಏಕತೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಅಂಜುಮನ್ ಮಹತ್ವದ ಪಾತ್ರ ವಹಿಸಬೇಕೆಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಗೌರವ ಅಧ್ಯಕ್ಷರಾಗಿ ಜನಾಬ್ ಮಜರ್ ಖಾಲಿದ್ ಮೌಲಾನ, ಅಧ್ಯಕ್ಷರಾಗಿ ನಬಿಸಾಬ್ ಸರ್ ನಾಯಕ್, ಉಪಾಧ್ಯಕ್ಷರಾಗಿ ರಾಜಸಾಬ್ ಮುದಗಲ್, ಇನ್ನೋರ್ವ ಉಪಾಧ್ಯಕ್ಷರಾಗಿ ಲಾಲಾಸಾಬ್ ಅಕ್ಕಬಾಯಿ, ಕಾರ್ಯಾಧ್ಯಕ್ಷರಾಗಿ ಶಬ್ಬೀರ್ ಅನ್ವರ್, ಪ್ರಧಾನ ಕಾರ್ಯದರ್ಶಿಯಾಗಿ ಲಾಡ್ಲೆ ಸಾಬ್ ಅಕ್ಕಬಾಯಿ, ಖಜಾಂಚಿಯಾಗಿ ಭಾಷಾ ತೋಟದ, ಜಂಟಿ ಕಾರ್ಯದರ್ಶಿಯಾಗಿ ರಹೀಮ್ ಮುದಗಲ್, ಸಹಕಾರ್ಯದರ್ಶಿಗಳಾಗಿ ಕಾಶಿಂಸಾಬ್ ಬನ್ನಿಗಿಡ, ದಾವಲ್ ಸಾಬ್ ಅಕ್ಕಬಾಯಿ, ಮುಸ್ತಫಾ ಕೋಟಾ, ಹಾಜಿಸಾಬ್ ಮುಲ್ಲಾ ಹಾಗೂ ಹುಸೇನ್ ಸಾಬ್ ಜಮಾದಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಿರಾಜ್ ತೋಟದ್, ಅಬ್ದುಲ್ ಸಾಬ್ ಗೌಡೂರು, ನಬಿಸಾಬ್ ಸರ್ ನಾಯಕ್, ಕಾಶಿಂ ತೋಟದ್, ಖಾಜಾಸಾಬ್ ಬನ್ನಿಗಿಡ, ಮಹೇಬೂಬ್ ಮುಲ್ಲಾ, ಬಾಬು ಬನ್ನಿಗಿಡ ಹಾಗೂ ಹಾಜಿಬಾಬು ಸರನಾಯಕ್ ಅವರನ್ನು ಯರಡೋಣ ಗ್ರಾಮದ ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು.

ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳನ್ನು ಅಭಿನಂದಿಸಿದ ತಾಲೂಕು ಅಂಜುಮನ್ ಮುಖಂಡರು, ಸಮಾಜದ ಅಭಿವೃದ್ಧಿ, ಶಿಕ್ಷಣದ ಉತ್ತೇಜನ, ಯುವಜನರಿಗೆ ಮಾರ್ಗದರ್ಶನ, ಧಾರ್ಮಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆ, ಬಡ ಮತ್ತು ನಿರ್ಗತಿಕರಿಗೆ ನೆರವು, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ವಾತಾವರಣ ನಿರ್ಮಾಣಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವಂತೆ ಕರೆ ನೀಡಿದರು.

ನೂತನ ಪದಾಧಿಕಾರಿಗಳು ಮಾತನಾಡಿ, ಸಮುದಾಯವು ತಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸಿ, ಸಮಾಜದ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಾರದರ್ಶಕ, ಸೇವಾಮನೋಭಾವದ ಹಾಗೂ ಜನಪರ ಆಡಳಿತ ನೀಡುವುದಾಗಿ ಭರವಸೆ ವ್ಯಕ್ತಪಡಿಸಿದರು. ಗ್ರಾಮದಲ್ಲಿ ಶಿಕ್ಷಣ, ಧಾರ್ಮಿಕ ಚಟುವಟಿಕೆಗಳು, ಸಾಮಾಜಿಕ ಸೇವೆಗಳು ಹಾಗೂ ಯುವಜನರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿ ಎಲ್ಲರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವ ಸಂಕಲ್ಪ ವ್ಯಕ್ತಪಡಿಸಿದರು.

ಸಭೆಯ ಅಂತ್ಯದಲ್ಲಿ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ನೂತನವಾಗಿ ಆಯ್ಕೆಯಾದ ಯರಡೋಣ ಗ್ರಾಮ ಅಂಜುಮನ್ ಕಮಿಟಿಯ ಪದಾಧಿಕಾರಿಗಳು ಮತ್ತು ಸದಸ್ಯರು, ಸಮುದಾಯದ ಗುರು–ಹಿರಿಯರು, ಧಾರ್ಮಿಕ ಮುಖಂಡರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ನೂತನ ತಂಡಕ್ಕೆ ಶುಭ ಹಾರೈಸಿದರು.

## ನೇಮಕಾತಿ ಪ್ರಕಟಣೆ

**BEL ನೇಮಕಾತಿ 2026 14 ಪ್ರಾಜೆಕ್ಟ್ ಇಂಜಿನಿಯರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ.**

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಜೆಕ್ಟ್ ಇಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ರಾಜಸ್ಥಾನದ ಜೋಧ್‌ಪುರ ಮತ್ತು ಜೈಸಲ್ಮೇರ್ ಹಾಗೂ ಗುಜರಾತ್‌ನ ಜಾಮ್‌ನಗರ ಮತ್ತು ಕಚ್ ಪ್ರದೇಶಗಳಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05-ಆಗಸ್ಟ್-2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: bel-india.in

## ಎಸ್‌ಐಆರ್ ಪ್ರಗತಿಗೆ ಸಹಾಯವಾಣಿ ಅವಶ್ಯಕ ಹಾಗೂ ಅವಧಿ ವಿಸ್ತರಣೆಗೆ ಎಸ್. ದೇವೇಂದ್ರಗೌಡ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮತದಾರರ ವಿಶೇಷ ಪರಿಷ್ಕರಣೆ ಕಾರ್ಯವು ಯಶಸ್ವಿಯಾಗಲು ಪ್ರತಿ ವಾರ್ಡ್ ಹಾಗೂ ಗ್ರಾಮ ಪಂಚಾಯತಿಗಳಲ್ಲೊಂದರಂತೆ ಸಹಾಯವಾಣಿ ಆರಂಭ ಮಾಡಬೇಕು ಹಾಗೂ ಎನ್ಯೂಮರೇಷನ್ ಫಾರಂ ಭರ್ತಿ ಬಾಕಿ ಇನ್ನು ಬಹಳಷ್ಟಿದ್ದು, ಅವಧಿ ವಿಸ್ತರಿಸಲು ಎಸ್‌ಐಆರ್ ಜಾಗೃತಿ ಸಮಿತಿ ಮುಖಂಡ ಎಸ್.ದೇವೇಂದ್ರಗೌಡ ಸರ್ಕಾರಕ್ಕೆ ಒತ್ತಾಯಿಸಿದರು.**




ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜಾಗೃತಿ ಸಮಿತಿ ಮುಖಂಡರು ತಹಶೀಲ್ದಾರರನ್ನು ಭೇಟಿ ಮಾಡಿದಾಗ ಗ್ರಾಮೀಣ ಪ್ರದೇಶಗಳಲ್ಲಿ ಪ್ರಗತಿಯಾಗುತ್ತಿದ್ದು, ನಗರ ಪ್ರದೇಶದಲ್ಲಿ ನಿಧಾನವಾಗಿ ಪ್ರಗತಿಯಾಗುತ್ತಿದೆ. ಕಾರಣ ನಮ್ಮ ಗುರಿ ಮುಟ್ಟಲು ತಡವಾಗುತ್ತಿದೆ ಎಂದು ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ನಮಗೆ ತಿಳಿಸಿದ್ದಾರೆ. ಮತದಾರರ ಪಟ್ಟಿಯಿಂದ ಜನರ ಹೆಸರು ಕೈತಪ್ಪಿ ಹೋಗಬಾರದು ಎನ್ನುವ ಉದ್ದೇಶದಿಂದ ನಾವೆಲ್ಲರೂ ಸೇರಿ ಎಸ್‌ಐಆರ್ ಜಾಗೃತಿ ವೇದಿಕೆ ರಚನೆ ಮಾಡಿ, ಎಸ್‌ಐಆರ್ ಪ್ರಗತಿಗೆ ಕೈ ಜೋಡಿಸುತ್ತಿದ್ದೇವೆ, ಮತದಾರರಿಗೆ ಸರೀಯಾದ ಮಾಹಿತಿ ಇಲ್ಲದೆ ಇರುವುದರಿಂದ ಪರಿಷ್ಕರಣೆಯ ಕಾರ್ಯವು ಕೂಡ ವಿಳಂಬವಾಗುತ್ತಿದೆ. ಆದ್ದರಿಂದ ವಾರ್ಡ್ವಾರು, ಪಂಚಾಯತಿವಾರು, ಸೇವಾ ಕೇಂದ್ರಗಳನ್ನು ತೆರೆದು ಸಹಾಯ ಮಾಡಿದರೆ, ಬಹಳ ಅನುಕೂಲವಾಗುತ್ತಿದೆ. ವಿಧಾನಸಭಾ ಕ್ಷೇತ್ರದಲ್ಲಿ ಸುಮಾರ 26 ಸಾವಿರಕ್ಕೂ ಹೆಚ್ಚು ಮತದಾರರು ಪರಮನೆಂಟ್ ಸ್ಥಳಾಂತರ ಎಂದು ತೋರಿಸಲಾಗಿದೆ. ಅವರು ಯಾರು ಎಂದು ಹೆಸರು ಬಿಡುಗಡೆ ಆದಲ್ಲಿ ಅದರಲ್ಲಿರುವ ಸರಿ ತಪ್ಪುಗಳನ್ನು ಕಂಡು ಹಿಡಿದು, ಮತದಾರರನ್ನು ಮತ್ತೆ ಪಟ್ಟಿಯಲ್ಲಿ ಸೇರಿಸಬಹುದು. ಕೆಲವು ಸಲ ಬಿಎಲ್‌ಓ ಗಳಿಗೆ ಇಂತವರನ್ನು ಕಂಡು ಹಿಡಿಯಲು ಸಾಧ್ಯವಾಗದೆ ಇರಬಹುದು, ನಮ್ಮಂತಹ ಸಂಘಟನೆಯವರು ಬಿಎಲ್‌ಓ 1 ಮತ್ತು 2 ಇವರುಗಳ ಸಮಕ್ಷಮದಲ್ಲಿ ಇದನ್ನು ಚರ್ಚಿಸಿದಲ್ಲಿ ಕೆಲವಷ್ಟು ಜನರಾದರು ಸಿಗಬಹುದು. ಇದನ್ನು ನಾವು ಶುಕ್ರವಾರದಂದು ಲಕ್ಷ್ಮೀನಗರದಲ್ಲಿ ಮಾಡಿದ್ದೇವೆ. ಬಿಎಲ್‌ಓ ಗಳಿಗೆ ಸಿಗದೆ ಇರುವ ಮತದಾರರನ್ನು ಹುಡಕಿ ಅವರು ಎಲ್ಲಿದ್ದಾರೆ ಅವರ ದೂರವಾಣಿ ಸಂಖ್ಯೆ ನೀಡುವ ಮೂಲಕ ಸಹಾಯ ಮಾಡಲಾಗಿದೆ ಇದೆ ರೀತಿ ಉಳಿದ ಕಡೆಯು ಇರಬಹುದು, ಕಾರಣ ಮತದಾರರ ಕರಡು ಪ್ರತಿ ಬೀಡಗಡೆ ಮಾಡಿದರೆ ಅದನ್ನು ನೋಡಿ ಕೆಲಸ ಮಾಡಲು ಸಹಾಯವಾಗುತ್ತದೆ ಮತ್ತು ತಾಂತ್ರಿಕ ದೋಷ (ಲಾಜಿಕಲ್ ಡಿಸ್ಕಪೇನ್ಸಿ) ಅಳವಡಿಕೆ ಬೇಡ ಎಂದರು. ಎಸ್‌ಐಆರ್ ಜಾರಿಗೆ ತರಬಾರದು ಎಂದು ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ ವಿರೋಧ ಮಾಡುತ್ತಾರೆ, ಆದರೆ ಅವರದೆ ಪಕ್ಷದ ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ.ಶಿವುಕುಮಾರ ಮತದಾರರ ಗುರುತಿನ ಚೀಟಿ ಇಲ್ಲದಿದ್ದರೆ, ಸರ್ಕಾರದ ಯಾವುದೇ ಸೌಲಭ್ಯ ಸಿಗುವುದಿಲ್ಲ ಎಂದು ಹೇಳುವ ಮೂಲಕ ಮತದಾರರ ಪರಿಷ್ಕರಣೆ ಮಾಡುವಂತೆ ಜನರ ಮೇಲೆ ಒತ್ತಡ ಹಾಕುವುದು ಎಷ್ಟು ಸರಿ ಎಂದು ಎಸ್‌ಐಆರ್ ನಾಗರಾಜ ಪೂಜಾರ್ ಕಾಂಗ್ರೆಸ್ ಪಕ್ಷದ ಮುಖಂಡರ ವಿರುದ್ಧ ಹರಿಹಾಯ್ದು, ತಮ್ಮ ರಾಜಕೀಯ ಲಾಭಕ್ಕಾಗಿ ಬಿಜೆಪಿ ಮತದಾರರ ವಿಶೇಷ ಪರಿಷ್ಕರಣೆ ಕಾರ್ಯ ಮಾಡುತ್ತಿದ್ದು ಚುನಾವಣೆ ಆಯೋಗವು ಸಹ ಬಿಜೆಪಿ ಕೈಗೊಂಬೆಯಂತೆ ಕುಣಿಯುತ್ತಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಎಸ್‌ಐಆರ್ ಜಾಗೃತ ವೇದಿಕೆಯ ಮುಖಂಡರಾದ ಬಸವಂತರಾಯಗೌಡ ಕಲ್ಲೂರು, ಕರೆಗೌಡ ಕುರಕುಂದಿ, ವೆಂಕನಗೌಡ ಗದ್ರಟಗಿ. ಬಸವರಾಜ ಬಾದರ್ಲಿ, ಡಾ.ವಸಿಂ, ಮಂಜುನಾಥ ಗಾಂಧಿನಗರ, ಚಂದ್ರಶೇಖರ ಗೊರೇಬಾಳ, ಗೋಪಾಲಕೃಷ್ಣ, ಸೇರಿದಂತೆ ಇನ್ನಿತರರು ಇದ್ದರು.

## ಅಮೃತ 2.0 ಯೋಜನೆ, ಅವೈಜ್ಞಾನಿಕ ಪೈಪ್‌ಲೈನ್ ಅಳವಡಿಕೆ; ಸಮಗ್ರ ತನಿಖೆಗೆ ಕರವೇ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ವಿವಿಧ ವಾರ್ಡ್ ಗಳಿಗೆ ಕುಡಿಯುವ ನೀರು ಪೂರೈಸುವ ಅಮೃತ ಯೋಜನೆ 2.0ರಡಿ ನಡೆಯುತ್ತಿರುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯನ್ನು ನಿಗದಿತ ತಾಂತ್ರಿಕ ಮಾನದಂಡಗಳಿಗೆ ಅನುಗುಣವಾಗಿ ನಿರ್ವಹಿಸದೆ, ಅರೆಬರೆ ಹಾಗೂ ಅವೈಜ್ಞಾನಿಕ ರೀತಿಯಲ್ಲಿ ಕೈಗೊಳ್ಳಲಾಗಿದೆ ಎಂದು ಮಸ್ಕಿ ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣ್ಣದ ಕಾರ್ಯಕರ್ತರು ಆರೋಪಿಸಿದ್ದಾರೆ.**



ಮಸ್ಕಿ ಪಟ್ಟಣದಬಸವೇಶ್ವರನಗರದಲ್ಲಿರುವ ಶಾಸಕರ ಕಚೇರಿಯಲ್ಲಿ ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್ ಬಸನಗೌಡ ತುರ್ವಿಹಾಳ ಅವರಿಗೆ ಕರವೇ ತಾಲೂಕು ಅಧ್ಯಕ್ಷ ದುರ್ಗರಾಜ ವಟಗಲ್ ನೇತೃತ್ವದಲ್ಲಿ ಶನಿವಾರ ಮನವಿ ಪತ್ರ ಸಲ್ಲಿಸಿದರು. ಪಟ್ಟಣದ ಹಲವು ವಾರ್ಡ್‌ಗಳಲ್ಲಿ ರಸ್ತೆಗಳನ್ನು ಅಗೆದು ಪೈಪ್‌ಲೈನ್ ಅಳವಡಿಸಿದ ಬಳಿಕ ಅವುಗಳನ್ನು ಸಮರ್ಪಕವಾಗಿ ಮರುಸ್ಥಾಪಿಸದ ಕಾರಣ ರಸ್ತೆಗಳಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸವಾರರು ಹಾಗೂ ಪಾದಚಾರಿಗಳು ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ ಎನ್ನಲಾಗಿದೆ. ಕೆಲವೆಡೆ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ರಸ್ತೆ ಹಾನಿಗೊಳಗಾಗಿರುವ ಬಗ್ಗೆ ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾಮಗಾರಿಯ ಅನುಷ್ಠಾನದಲ್ಲಿ ಗುತ್ತಿಗೆದಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸರ್ಕಾರದ ಅನುದಾನದ ಸದ್ಬಳಕೆ ಆಗಿಲ್ಲ ಎಂಬ ಆರೋಪಗಳೂ ಕೇಳಿಬಂದಿವೆ. ಈ ಹಿನ್ನೆಲೆಯಲ್ಲಿ ಕಾಮಗಾರಿಯ ತಾಂತ್ರಿಕ ಗುಣಮಟ್ಟದ ಕುರಿತು ಸ್ವತಂತ್ರ ಸಂಸ್ಥೆಯಿಂದ ಸಮಗ್ರ ತನಿಖೆ ನಡೆಸಿ, ವೆಚ್ಚ ಹಾಗೂ ಕಾಮಗಾರಿ ಗುಣಮಟ್ಟದ ಆಡಿಟ್ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಅಮೃತ ಯೋಜನೆ 2.0ರ ಉದ್ದೇಶ ಜನತೆಗೆ ಸುರಕ್ಷಿತ ಹಾಗೂ ನಿರಂತರ ಕುಡಿಯುವ ನೀರು ಒದಗಿಸುವುದಾಗಿದೆ. ಆದರೆ ಕಾಮಗಾರಿಯ ಗುಣಮಟ್ಟದ ಬಗ್ಗೆ ಉದ್ಭವಿಸಿರುವ ಪ್ರಶ್ನೆಗಳು ಯೋಜನೆಯ ಪರಿಣಾಮಕಾರಿತ್ವದ ಬಗ್ಗೆ ಅನುಮಾನ ಮೂಡಿಸಿವೆ ಎಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಕಾಮಗಾರಿ ಬಗ್ಗೆ ಆರೋಪಗಳು ಸಾಬೀತಾದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು, ದೋಷಪೂರಿತ ಕಾಮಗಾರಿಯನ್ನು ಮರುನಿರ್ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು. ಅಲ್ಲದೆ ಮುಂಬರುವ ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೂ ಹಾಗೂ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಲಾಗುವುದು ಎಂದು ಕರವೇ ಅಧ್ಯಕ್ಷ ದುರ್ಗರಾಜ್ ವಟಗಲ್ ತಿಳಿಸಿದರು. ವೀರಭದ್ರ, ಅಯ್ಯಪ್ಪ, ಹನುಮಂತ, ಸದ್ದಾಂ ಸೇರಿದಂತೆ ಇನ್ನಿತರರು ಇದ್ದರು.

## ಕರ್ನಾಟಕ ಪ್ರೆಸ್ ಕ್ಲಬ್ ಮುಧೋಳ್ ಘಟಕದಿಂದ ಅದ್ದೂರಿಯಾಗಿ ಪತ್ರಿಕಾ ದಿನ ಆಚರಣೆ



ನೈಜ್ಯ ದೆಸೆ ನ್ಯೂಸ್

**ಮುಧೋಳ: ದಿನಾಂಕ 30 ಜುಲೈ 2026 ಗುರುವಾರರಂದು ಕರ್ನಾಟಕ ಪ್ರೆಸ್ ಕ್ಲಬ್ ಮುಧೋಳ ತಾಲೂಕು ಘಟಕದ ವತಿಯಿಂದ ಪತ್ರಿಕಾ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣ ಹಾಗೂ ಸಮಾಜಮುಖಿ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಪ್ರೆಸ್ ಕ್ಲಬ್ ಅಧ್ಯಕ್ಷರಾದ ಶ್ರೀ ಲಾಲಸಾಬ ನದಾಫ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು.**

ತಹಶೀಲ್ದಾರರಾದ ಶ್ರೀ ಚಿಕ್ಕಪ್ಪ ನಾಯಕ ಅವರು ಸಸಿ ನೆಟ್ಟು, ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಧೋಳ ಸಿಪಿಐ ಶ್ರೀ ಎಮ್. ನಾಗರಡ್ಡಿ ಅವರು ಮಾತನಾಡಿ, "ಪರಿಸರ ಪ್ರೇಮಿಯಾಗಿ ಕೆಲಸ ಮಾಡುವುದರಿಂದ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ ಮತ್ತು ನೀವು ಹಮ್ಮಿಕೊಳ್ಳುವ ಇಂತಹ ಕಾರ್ಯಕ್ರಮಗಳು ಎಲ್ಲರಿಗೂ ಮಾದರಿಯಾಗಲಿ" ಎಂದು ಶುಭ ಹಾರೈಸಿದರು. ಮುಧೋಳ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ತಂಡದೊಂದಿಗೆ ಕರ್ನಾಟಕ ಪ್ರೆಸ್ ಕ್ಲಬ್‌ನ ಎಲ್ಲಾ ಪದಾಧಿಕಾರಿಗಳು ಭೇಟಿ ನೀಡಿ, ದಾಖಲಾದ ಎಲ್ಲಾ ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಿ ಆರೋಗ್ಯ ವಿಚಾರಿಸಿದರು.

ಬುದ್ಧಿಮಾಂದ್ಯ ಮಕ್ಕಳ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಹೊಳೆಬಸಯ್ಯಾ ಹಿರಮಠ ಮಾಲಾಪೂರ ಅವರು ದಿವ್ಯ ಸಾನಿಧ್ಯ ವಹಿಸಿದ್ದರು. ಉದ್ಘಾಟಕರಾಗಿ ಆಗಮಿಸಿದ ಡಾ. ಶಿವಾನಂದ ಕುಬಸದ ಅವರು ಮಾತನಾಡಿ, ಬುದ್ಧಿ ವಿಕಲಚೇತನ ಮಕ್ಕಳನ್ನು ನೋಡಿಕೊಳ್ಳುವುದು ಬಹಳ ಕಷ್ಟದಾಯಕವಾದರೂ, ಸಿಬ್ಬಂದಿವರ್ಗದವರು ಅದಕ್ಕಾಗಿ ಬಹಳ ಶ್ರಮಪಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿರಿಯ ನ್ಯಾಯವಾದಿ ಶ್ರೀ ಪ್ರಕಾಶ ವಸ್ತ್ರದ್ ಹಾಗೂ ಡಾ. ಸವಿತಾ ಕರಲವಾಡಿ ಅವರು ಮಾತನಾಡಿ, ಮಕ್ಕಳ ಶಾಂತತೆಯನ್ನು ಕೊಂಡಾಡುತ್ತಾ, "ಬುದ್ಧಿಯಿದ್ದ ಜನಾಂಗಕ್ಕಿಂತ ಬುದ್ಧಿಮಾಂದ್ಯ ಮಕ್ಕಳು ಬಹಳ ಉತ್ತಮ, ಈ ಮಕ್ಕಳು ಸಾಕ್ಷಾತ್ ದೇವರ ಮಕ್ಕಳು" ಎಂದು ಹೇಳಿ ಅವರನ್ನು ಪ್ರೋತ್ಸಾಹಿಸಿದರು. ಈ ಸಮಗ್ರ ಕಾರ್ಯಕ್ರಮದ ಯಶಸ್ಸಿಗೆ ಹಿರಿಯ ನ್ಯಾಯವಾದಿ ಶ್ರೀ ಐ.ಎಚ್. ಅಂಬಿ, ಅಂಜುಮನ್ ಹಿರಿಯ ಮುಖಂಡ ಶ್ರೀ ಖಾಜಾಮಿನ ಬಾಗವಾನ ಹಾಗೂ ಬಿಜೆಪಿ ಮೈನಾರಿಟಿ ಅಧ್ಯಕ್ಷ ಶ್ರೀ ಸಾಹೆಬಲಾಲ ನದಾಫ ಅವರು ವಿಶೇಷ ಸಹಕಾರ ನೀಡಿದರು.

ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಸುರೇಶ ಭಸ್ಮೆ ಲಾಲಸಾಬ ನದಾಫ್, ದಾದಾಪೀರ ಸುರನಾಶಿ, ಉಮೇಶ ಶಿಂಧೆ ,ನಾಮದೇವ ಕೋಪಡೆ9, ಅಬ್ದುಲರೆಹಮಾನ ಮನಿಯಾರ, ಅನೀಲ ಬರಗಿ, ಮರಗಪ್ಪ ಮಾದರ, ನೂರಲಿ ಜಮಾದಾರ , ಶ್ರೀಕಾಂತ ದಾಸಾರ, ಅವಿನಾಶ ಕೋಷ್ಠಿ, ಈ ಎಲ್ಲ ಕಾರ್ಯಕ್ರಮವನ್ನು ಪ್ರಾಸ್ತಾಪಿಸಲಾಗಿತ್ತು.

## ಪ್ರಜಾಪ್ರಭುತ್ವದ ಬಲವರ್ಧನೆಗೆ ಪತ್ರಿಕೆಗಳು ಪ್ರಮುಖ ಅಸ್ತ್ರ : ಕೈಲಾಸಲಿಂಗ ಶಿವಾಚಾರ್ಯರು

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪತ್ರಕರ್ತರು ಸಮಾಜ ಮತ್ತು ಆಡಳಿತ ವರ್ಗದ ನಡುವೆ ಪರಿಣಾಮಕಾರಿ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರ ಸೇವೆ ಸಮಾಜಕ್ಕೆ ಅತ್ಯಮೂಲ್ಯವಾಗಿದೆ ಎಂದು ಪುರತಗೇರಿಯ ಕೈಲಾಸ ಲಿಂಗ ಶಿವಾಚಾರ್ಯರು ಹೇಳಿದರು.**




ತಾಲೂಕಿನ ಎಮ್ಮಿಗನೂರು ಸಮೀಪದ ಎಚ್. ವೀರಾಪುರ ಗ್ರಾಮದ ಜ್ಞಾನಜ್ಯೋತಿ ಶಿವಲಿಂಗ ಮಂದಿರದಲ್ಲಿ ಗುರುವಾರ ಕುರುಗೋಡು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಕರ್ತರ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಪತ್ರಕರ್ತರು ಹಗಲು, ರಾತ್ರಿ ಎನ್ನದೆ ಜನಸಾಮಾನ್ಯರ ಸಮಸ್ಯೆಗಳನ್ನು ಬೆಳಕಿಗೆ ತಂದು ಸಮಾಜ ತಿದ್ದುವ ಜವಾಬ್ದಾರಿಯುತ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಶ್ಲಾಘಿಸುವ ಜೊತೆಗೆ ಪ್ರಜಾಪ್ರಭುತ್ವದ ಬಲವರ್ಧನೆಗೆ ಪ್ರಮುಖ ಅಸ್ತ್ರವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಜ್ಞಾನಜ್ಯೋತಿ ಶಿವಲಿಂಗ ಮಂದಿರದ ಜಡೇಶ ತಾತ ಅವರು ದಿವ್ಯಸಾನಿಧ್ಯವಹಿಸಿ ಮಾತನಾಡಿ, ಆಧುನಿಕ ತಂತ್ರಜ್ಞಾನ ಯುಗದಲ್ಲಿ ಪತ್ರಕರ್ತರು ವೃತ್ತಿಪರ ಒತ್ತಡ, ಸುಳ್ಳು ಸುದ್ದಿಗಳ ಹಾವಳಿ ಹಾಗೂ ವಿವಿಧ ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದರೂ ಸಮಾಜದ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಪತ್ರಿಕಾ ಸ್ವಾತಂತ್ರ್ಯ, ಸಾಮಾಜಿಕ ಜವಾಬ್ದಾರಿ ಹಾಗೂ ನೈತಿಕ ಮೌಲ್ಯಗಳನ್ನು ಉಳಿಸಿಕೊಂಡು ಜನಪರ ಪತ್ರಿಕೋದ್ಯಮವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಕಾನಿಪ ತಾಲೂಕು ಅಧ್ಯಕ್ಷ ಜಿ.ಎಂ.ಬಸಯ್ಯಸ್ವಾಮಿ ಕಾರ್ಯಕ್ರಮ ಅಧ್ಯಕ್ಷತೆವಹಿಸಿ ಮಾತನಾಡಿ, ಪತ್ರಿಕೋದ್ಯಮದ ಮೌಲ್ಯ, ನಿಷ್ಪಕ್ಷಪಾತ ವರದಿ ಹಾಗೂ ಸಮಾಜಮುಖಿ ಜವಾಬ್ದಾರಿಯ ಕುರಿತು ವಿವರಿಸಿದರು. ಕಾನಿಪ ಸಂಘದ ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸದಸ್ಯ ಜಿ.ಚಂದ್ರಶೇಖರಗೌಡ ಪ್ರಾಸ್ತವಿಕವಾಗಿ ಮಾತನಾಡಿ, ಪತ್ರಕರ್ತರು ಸಮಾಜದ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಜವಾಬ್ದಾರಿಯುತ ಸೇವೆ ಸಲ್ಲಿಸುತ್ತಿದ್ದಾರೆ ಎಂದರು. ವರದಿಗಾರ ಶಿವಕುಮಾರ ಬೆನ್ನೂರು ಮಾತನಾಡಿ, ಪತ್ರಕರ್ತರು ಆಡಳಿತ ವ್ಯವಸ್ಥೆ ಹಾಗೂ ಜನಸಾಮಾನ್ಯರ ನಡುವಿನ ಪರಿಣಾಮಕಾರಿ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸಮಾಜದ ಸಮಸ್ಯೆಗಳನ್ನು ಬೆಳಕಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ತಿಳಿಸಿದರು. ಎಚ್ ಎಮ್ ಮಂಜುನಾಥ್ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಚಾನಾಳ ರೋಹಿತ, ದೇವೇಂದ್ರಪ್ಪ ಮಣ್ಣೂರು ಇವರಿಗೆ ಪ್ರತಿಭಾರತ್ನ ಪ್ರಶಸ್ತಿ, ಬಯಲಾಟ ಕಲಾವಿದ ದೇವೇಂದ್ರಪ್ಪ, ಜೋಗತಿ ರೇಣುಕಾ, ಬಸವರಾಜ, ಪ್ರಕಾಶ್ ಯಲ್ಲಾಪುರ ಇವರಿಗೆ ಸೇವಾರತ್ನ ಪ್ರಶಸ್ತಿ, ಹಿರಿಯ ಪತ್ರಕರ್ತ ಅರಳಿ ಕುಮಾರಸ್ವಾಮಿ,ಪತ್ರಿಕಾ ವಿತರಕರಾದ ಭರತ್ ಕುಮಾರ, ಹುಸೇನ್ ಸಾಬ್ ಅವರಿಗೆ ಕಾಯಕರತ್ನ ಪ್ರಶಸ್ತಿಯೊಂದಿಗೆ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ದ್ಯಾಮನಗೌಡ ಪಾಟೀಲ್, ಜಿಲ್ಲಾ ಕಾರ್ಯಕಾರಣಿ ಸಮಿತಿ ಸದಸ್ಯ ಉಪ್ಪಾರ ರಮೇಶ, ಮುಖ್ಯಗುರು ಕೊಟ್ರಪ್ಪ, ಮುಖಂಡರಾದ ಬಿ ಸದಾಶಿವಪ್ಪ ಧಣಿ, ಶಿಕ್ಷಕರಾದ ರಾಮು, ಮಲ್ಲೇಶ, ಪೀರಾವಲಿ ಸೇರಿದಂತೆ ವಿದ್ಯಾರ್ಥಿಗಳು, ಸ್ಥಳೀಯರು, ಭಕ್ತರು ಪಾಲ್ಗೊಂಡಿದ್ದರು.

## ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆ, ಕಾನೂನು ಅರಿವು ಹಾಗೂ ಮಾದಕ ವಸ್ತು ವಿರೋಧಿ ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ವಿದ್ಯಾರ್ಥಿಗಳು ಉತ್ತಮ ಶಿಕ್ಷಣದೊಂದಿಗೆ ಕಾನೂನು, ರಸ್ತೆ ಸುರಕ್ಷತೆ ಹಾಗೂ ಸಾಮಾಜಿಕ ಜವಾಬ್ದಾರಿಗಳ ಕುರಿತು ಅರಿವು ಹೊಂದಬೇಕು. ಯುವಜನರು ಮಾದಕ ವಸ್ತುಗಳಿಂದ ದೂರವಿದ್ದು, ಸುರಕ್ಷಿತ ಮತ್ತು ಜವಾಬ್ದಾರಿಯುತ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸಿಂಧನೂರು ಉಪವಿಭಾಗದ ಡಿಎಸ್‌ಪಿ ಅವರು ಕರೆ ನೀಡಿದರು.**



ಸಿಂಧನೂರು ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಗೊರೆಬಾಳ ಗ್ರಾಮದ ಅಂಬೇಡ್ಕರ್ ಶಾಲೆಯಲ್ಲಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ, ಸಂಚಾರ ನಿಯಮಗಳು, ಬಾಲ್ಯವಿವಾಹ ನಿಷೇಧ, ಪೋಕ್ಸೋ ಕಾಯ್ದೆ, ಮಾದಕ ವಸ್ತುಗಳ ನಿಯಂತ್ರಣ ಹಾಗೂ ಸೈಬರ್ ಅಪರಾಧಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಚಾಲಕ ಮತ್ತು ಹಿಂಬದಿ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ತಿಳಿಸಿದರು. ಹೆಲ್ಮೆಟ್ ಕೇವಲ ದಂಡದಿಂದ ತಪ್ಪಿಸಿಕೊಳ್ಳಲು ಧರಿಸುವ ಸಾಧನವಲ್ಲ; ಅಪಘಾತದ ಸಂದರ್ಭದಲ್ಲಿ ಜೀವ ರಕ್ಷಿಸುವ ಪ್ರಮುಖ ಸುರಕ್ಷತಾ ಕ್ರಮವಾಗಿದೆ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ವಾಹನ ಚಾಲನೆ ವೇಳೆ ಅತಿವೇಗ, ನಿರ್ಲಕ್ಷ್ಯ, ಮೊಬೈಲ್ ಬಳಕೆ ಹಾಗೂ ಸಂಚಾರ ನಿಯಮಗಳ ಉಲ್ಲಂಘನೆಯಿಂದ ಸಂಭವಿಸಬಹುದಾದ ಅಪಘಾತಗಳ ಕುರಿತು ವಿವರಿಸಿದರು.

ರಸ್ತೆಗಳಲ್ಲಿ ಸಂಚಾರ ಸೂಚನಾ ಫಲಕಗಳನ್ನು ಪಾಲಿಸುವುದು, ಅಪ್ರಾಪ್ತ ವಯಸ್ಸಿನಲ್ಲಿ ವಾಹನ ಚಾಲನೆ ಮಾಡದಿರುವುದು ಹಾಗೂ ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸದಿರುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು. ಬಾಲ್ಯವಿವಾಹವು ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಮಾಜಿಕ ಅನಿಷ್ಟ ಪದ್ಧತಿಯಾಗಿದೆ ಎಂದು ತಿಳಿಸಿದರು. ಬಾಲ್ಯವಿವಾಹದ ಕುರಿತು ಮಾಹಿತಿ ದೊರೆತಲ್ಲಿ ಅದನ್ನು ನಿರ್ಲಕ್ಷಿಸದೆ ಶಿಕ್ಷಕರು, ಪೋಷಕರು, ಸಂಬಂಧಪಟ್ಟ ಅಧಿಕಾರಿಗಳು ಅಥವಾ ಪೊಲೀಸ್ ಇಲಾಖೆಗೆ ತಕ್ಷಣ ಮಾಹಿತಿ ನೀಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಮಕ್ಕಳನ್ನು ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಶೋಷಣೆಯಿಂದ ರಕ್ಷಿಸುವ ಉದ್ದೇಶದಿಂದ ಜಾರಿಯಲ್ಲಿರುವ ಪೋಕ್ಸೋ (POCSO) ಕಾಯ್ದೆ ಕುರಿತು ವಿವರಿಸಿದರು. ಮಕ್ಕಳಿಗೆ ಯಾವುದೇ ರೀತಿಯ ಕಿರುಕುಳ, ಅಸಭ್ಯ ವರ್ತನೆ ಅಥವಾ ಅನುಚಿತ ಸ್ಪರ್ಶ ಎದುರಾದಲ್ಲಿ ಮೌನವಾಗದೆ ವಿಶ್ವಾಸಾರ್ಹ ವ್ಯಕ್ತಿಗಳಿಗೆ ತಿಳಿಸಿ, ಅಗತ್ಯವಿದ್ದಲ್ಲಿ ಪೊಲೀಸ್ ಇಲಾಖೆಯ ನೆರವು ಪಡೆಯಬೇಕು ಎಂದು ಸಲಹೆ ನೀಡಿದರು.

ಮಾದಕ ವಸ್ತುಗಳ ಸೇವನೆಯು ಯುವಜನರ ಆರೋಗ್ಯ, ಶಿಕ್ಷಣ, ಕುಟುಂಬ ಮತ್ತು ಭವಿಷ್ಯವನ್ನು ಹಾಳುಮಾಡುತ್ತದೆ ಎಂದು ಎಚ್ಚರಿಸಿದರು. ಡ್ರಗ್ಸ್ ಬಳಕೆ, ಸಂಗ್ರಹಣೆ, ಮಾರಾಟ, ಸಾಗಾಣಿಕೆ ಮತ್ತು ವಿತರಣೆ ಕಾನೂನುಬಾಹಿರವಾಗಿದ್ದು, ಇಂತಹ ಕೃತ್ಯಗಳ ವಿರುದ್ಧ ಎನ್‌ಡಿಪಿಎಸ್ (NDPS) ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಮಾದಕ ವಸ್ತುಗಳ ಆಮಿಷಕ್ಕೆ ಒಳಗಾಗದೆ, ಆರೋಗ್ಯಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಸೈಬರ್ ಅಪರಾಧಗಳ ಕುರಿತು ಮಾತನಾಡಿ, ಅಪರಿಚಿತ ವ್ಯಕ್ತಿಗಳಿಂದ ಬರುವ ಕರೆಗಳು, ಸಂದೇಶಗಳು, ನಕಲಿ ವೆಬ್‌ಸೈಟ್‌ಗಳು ಹಾಗೂ ಅನುಮಾನಾಸ್ಪದ ಲಿಂಕ್‌ಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ತಿಳಿಸಿದರು. ಬ್ಯಾಂಕ್ ಖಾತೆ ವಿವರಗಳು, ಎಟಿಎಂ ಪಿನ್, ಪಾಸ್‌ವರ್ಡ್ ಮತ್ತು ಒಟಿಪಿ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯುತವಾಗಿ ಬಳಸಬೇಕು. ಅಪರಿಚಿತರೊಂದಿಗೆ ವೈಯಕ್ತಿಕ ಮಾಹಿತಿ ಅಥವಾ ಫೋಟೋಗಳನ್ನು ಹಂಚಿಕೊಳ್ಳುವುದರಿಂದ ಉಂಟಾಗಬಹುದಾದ ಅಪಾಯಗಳ ಕುರಿತು ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು. ಸೈಬರ್ ವಂಚನೆ ಅಥವಾ ಆನ್‌ಲೈನ್ ಕಿರುಕುಳಕ್ಕೆ ಒಳಗಾದಲ್ಲಿ ತಕ್ಷಣ ಪೋಷಕರು, ಶಿಕ್ಷಕರು ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಹೇಳಿದರು. ವಿದ್ಯಾರ್ಥಿಗಳು ಕಾನೂನುಗಳ ಬಗ್ಗೆ ಅರಿವು ಹೊಂದಿ, ಸಂಚಾರ ನಿಯಮಗಳನ್ನು ಪಾಲಿಸುವುದರ ಜೊತೆಗೆ ಸಮಾಜದಲ್ಲಿ ನಡೆಯುವ ಅನಿಷ್ಟ ಚಟುವಟಿಕೆಗಳ ವಿರುದ್ಧ ಜಾಗೃತರಾಗಬೇಕು. ತಮ್ಮ ಸುರಕ್ಷತೆಯೊಂದಿಗೆ ಇತರರ ಸುರಕ್ಷತೆಯನ್ನೂ ಕಾಪಾಡುವ ಜವಾಬ್ದಾರಿಯುತ ನಾಗರಿಕರಾಗಬೇಕು ಎಂದು ಡಿಎಸ್‌ಪಿ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಶಿಕ್ಷಕರು, ಶಿಕ್ಷಕರು, ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಟ್ಯಾಲಿ (Tally)

ಟ್ಯಾಲಿ (Tally) ಎನ್ನುವುದು ಲೆಕ್ಕಪತ್ರ ನಿರ್ವಹಣೆ (Accounting), ತೆರಿಗೆ (GST), ಇನ್ವೆಂಟರಿ (Inventory), ವೇತನ ನಿರ್ವಹಣೆ (Payroll) ಹಾಗೂ ಹಣಕಾಸು ವ್ಯವಹಾರಗಳನ್ನು ಕಂಪ್ಯೂಟ–ರ್ ಮೂಲಕ ಸುಲಭವಾಗಿ ನಿರ್ವಹಿಸಲು ಬಳಸುವ ಅತ್ಯಂತ ಜನಪ್ರಿಯ ಅಕೌಂಟಿಂಗ್ ಸಾಫ್ಟ್‌ವೇರ್ ಆಗಿದೆ. ಭಾರತದಲ್ಲಿನ ಸಾವಿರಾರು ವ್ಯಾಪಾರ ಸಂಸ್ಥೆಗಳು, ಕಂಪನಿಗಳು ಮತ್ತು ಚಾರ್ಟರ್ಡ್ ಅಕೌಂಟೆಂಟ್ (CA) ಕಚೇರಿಗಳು ಟ್ಯಾಲಿಯನ್ನು ಬಳಸುತ್ತಿವೆ. ಆದ್ದರಿಂದ ಈ ಕೋರ್ಸ್ ಉದ್ಯೋಗ ಪಡೆಯಲು ಬಹಳ ಉಪಯುಕ್ತವಾಗಿದೆ.

ಕೋರ್ಸ್‌ನ ಪ್ರಮುಖ ವಿಷಯಗಳು (Course Contents)
– ಲೆಕ್ಕಪತ್ರದ ಮೂಲಭೂತ ಅಂಶಗಳು (Accounting Basics)
– ಟ್ಯಾಲಿ Prime ಪರಿಚಯ ಮತ್ತು ಕಂಪನಿ ಸೃಷ್ಟಿ (Company Creation) – ಲೆಡ್ಜರ್ ಮತ್ತು ಗುಂಪುಗಳ ರಚನೆ (Ledgers & Groups) – ವೌಚರ್ ಎಂಟ್ರಿಗಳು (Payment, Receipt, Contra, Journal, Sales, Purchase)
– ಬ್ಯಾಂಕಿಂಗ್ ವ್ಯವಹಾರಗಳು (Bank Reconciliation)
– ಜಿಎಸ್‌ಟಿ (GST) ನೋಂದಣಿ ಮತ್ತು ವ್ಯವಹಾರಗಳು
– ಟಿಡಿಎಸ್ (TDS) ಮತ್ತು ಟಿಸಿಎಸ್ (TCS) ಮೂಲಭೂತ ಮಾಹಿತಿ
– ಇನ್ವೆಂಟರಿ ಮತ್ತು ಸ್ಟಾಕ್ ನಿರ್ವಹಣೆ
– ವೇತನ ನಿರ್ವಹಣೆ (Payroll)
– ಬಜೆಟ್ ಮತ್ತು ವೆಚ್ಚ ನಿಯಂತ್ರಣ (Budgeting & Cost Centres)
– ಹಣಕಾಸು ವರದಿಗಳು (Balance Sheet, Profit & Loss, Trial Balance, Cash Flow)
– ಬ್ಯಾಕಪ್ ಮತ್ತು ಡೇಟಾ ಭದ್ರತೆ (Data Backup & Restore)
– ಇ–ಇನ್‌ವಾಯ್ಸ್ (e-Invoice) ಮತ್ತು ಇ–ವೇ ಬಿಲ್ (e-Way Bill) ಪರಿಚಯ

ಕೋರ್ಸ್ ಅವಧಿ ಮತ್ತು ಅರ್ಹತೆ
ಅವಧಿ: 2 ರಿಂದ 3 ತಿಂಗಳುಗಳು (ಕೆಲವು ಸಂಸ್ಥೆಗಳಲ್ಲಿ 1 ರಿಂದ 6 ತಿಂಗಳುಗಳವರೆಗೆ)
ಅರ್ಹತೆ: – ಎಸ್‌ಎಸ್‌ಎಲ್‌ಸಿ (10ನೇ ತರಗತಿ) ಉತ್ತೀರ್ಣ
– ಪಿಯುಸಿ (ಕಗಅ)
– ಯಾವುದೇ ಪದವಿ (Degree)
– ಬಿ.ಕಾಂ (B.Com), ಎಂ.ಕಾಂ (M.Com), ಬಿಬಿಎ (BBA) ವಿದ್ಯಾರ್ಥಿಗಳಿಗೆ ವಿಶೇಷವಾಗಿ ಅನುಕೂಲಕರ

ಅಗತ್ಯ ಕೌಶಲ್ಯಗಳು
– ಮೂಲಭೂತ ಕಂಪ್ಯೂಟರ್ ಜ್ಞಾನ – ಗಣಿತ ಮತ್ತು ಲೆಕ್ಕಪತ್ರದಲ್ಲಿ ಆಸಕ್ತಿ
– ನಿಖರತೆ ಮತ್ತು ವಿಶ್ಲೇಷಣಾ ಕೌಶಲ್ಯ– MS Excel ಬಳಸುವ ಸಾಮರ್ಥ್ಯ ಇದ್ದರೆ ಹೆಚ್ಚುವರಿ ಪ್ರಯೋಜನ

ಉದ್ಯೋಗಾವಕಾಶಗಳು (Job Opportunities)
– ಅಕೌಂಟೆಂಟ್ (Accountant)
– ಜೂನಿಯರ್ ಅಕೌಂಟೆಂಟ್
- GST ಎಕ್ಸಿಕ್ಯೂಟಿವ್
- Billing Executive / Billing Clerk
- Accounts Assistant
- Inventory Executive
- Payroll Executive
- Tax Assistant
- Office Administrator
- Finance Executive
- Audit Assistant
- CA ಕಚೇರಿಯಲ್ಲಿ Accounts Trainee

ಉದ್ಯೋಗ ಕ್ಷೇತ್ರಗಳು
– ಖಾಸಗಿ ಕಂಪನಿಗಳು
– ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (SMEs)
– ಚಾರ್ಟರ್ಡ್ ಅಕೌಂಟೆಂಟ್ (CA) ಕಚೇರಿಗಳು
– ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು
– ವ್ಯಾಪಾರ ಸಂಸ್ಥೆಗಳು
– ಉತ್ಪಾದನಾ (Manufacturing) ಕಂಪನಿಗಳು
– ಆಸ್ಪತ್ರೆಗಳು
– ಶಾಲೆಗಳು ಮತ್ತು ಕಾಲೇಜುಗಳು
– ಎನ್‌ಜಿಒಗಳು (NGOs)

ವೇತನ (Salary)

– ಫ್ರೆಶರ್: ?12,000 ? ?20,000 ಪ್ರತಿ ತಿಂಗಳು
– 1?3 ವರ್ಷ ಅನುಭವ: ?20,000 ? ?35,000 ಪ್ರತಿ ತಿಂಗಳು
– ಅನುಭವಿ ಅಭ್ಯರ್ಥಿಗಳು: ?35,000 ? ?60,000 ಅಥವಾ ಅದಕ್ಕಿಂತ ಹೆಚ್ಚು (ಸಂಸ್ಥೆ ಮತ್ತು ಅನುಭವವನ್ನು ಅವಲಂಬಿಸಿ)

ಮುಂದಿನ ಶಿಕ್ಷಣ ಮತ್ತು ಪ್ರಮಾಣಪತ್ರಗಳು
– Advanced Tally Prime
- GST Practitioner Course
- Income Tax Course
- MS Excel (Advanced)
- SAP FICO
- ERP Accounting
- Financial Accounting Certification

ಟ್ಯಾಲಿ ಕೋರ್ಸ್‌ನ ಪ್ರಯೋಜನಗಳು
– ಕಡಿಮೆ ಅವಧಿಯಲ್ಲಿ ಉದ್ಯೋಗಕ್ಕೆ ಅಗತ್ಯ ಕೌಶಲ್ಯಗಳನ್ನು ಕಲಿಯಬಹುದು.
– ಲೆಕ್ಕಪತ್ರ, ತೆರಿಗೆ ಮತ್ತು ಹಣಕಾಸು ಕ್ಷೇತ್ರದಲ್ಲಿ ಉತ್ತಮ ಅವಕಾಶಗಳು ದೊರೆಯುತ್ತವೆ.
– ಸ್ವಂತ ವ್ಯವಹಾರದ ಲೆಕ್ಕಪತ್ರವನ್ನು ಸುಲಭವಾಗಿ ನಿರ್ವಹಿಸಬಹುದು.
– ಉದ್ಯೋಗದ ಜೊತೆಗೆ ಫ್ರೀಲಾನ್ಸ್ ಅಕೌಂಟಿಂಗ್ ಸೇವೆಗಳನ್ನೂ ನೀಡಬಹುದು.
– ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಲೆಕ್ಕಪತ್ರ ಸಂಬಂಧಿತ ಹುದ್ದೆಗಳಿಗೆ ಉಪಯುಕ್ತ.
– ಸಾರಾಂಶ: ಟ್ಯಾಲಿ ಕೋರ್ಸ್ ಲೆಕ್ಕಪತ್ರ ಮತ್ತು ಹಣಕಾಸು ಕ್ಷೇತ್ರದಲ್ಲಿ ವೃತ್ತಿಜೀವನ ನಿರ್ಮಿಸಲು ಬಯಸುವ ವಿದ್ಯಾರ್ಥಿಗಳು ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಅತ್ಯಂತ ಉಪಯುಕ್ತವಾದ, ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಬಹುದಾದ ವೃತ್ತಿಪರ ಕೋರ್ಸ್ ಆಗಿದೆ.

## ಮಕ್ಕಳ ಅವಘಡಕ್ಕೆ ಕಾರಣರಾದ ಮೊರಾರ್ಜಿ ವಸತಿ ಶಾಲೆಯ ಅಧಿಕಾರಿಗಳನ್ನು ಅಮಾನತು ಮಾಡಲು ಕೆಆರ್.ಎಸ್ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಹೊರವಲಯದ ಒಳಬಳ್ಳಾರಿ ರಸ್ತೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹುಳ ಬಿದ್ದ ಮತ್ತು ಕಲುಷಿತಗೊಂಡ ಆಹಾರ ಸೇವಿಸಿ 70ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳು ಹೊಟ್ಟೆನೋವು, ವಾಂತಿ, ತಲೆನೋವಿನಿಂದ ಬಳಲಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ಜರುಗಿದ್ದು, ಬಡ ಮಕ್ಕಳ ಜೊತೆ ಚೆಲ್ಲಾಟವಾಡುತ್ತಿರುವ ಶಾಲೆಯ ಪ್ರಾಂಶುಪಾಲ, ವಾರ್ಡನ್, ಹಾಗೂ ಅಡುಗೆ ಸಿಬ್ಬಂದಿ ಅಜಾಗರೂಕತೆಯನ್ನು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್.ಎಸ್) ಪಕ್ಷವು ಖಂಡಿಸುತ್ತದೆ ಎಂದು ಜಿಲ್ಲಾ ಕಾರ್ಯಾಧ್ಯಕ್ಷ ಕೃಷ್ಣ ಸುಕಾಲಪೇಟೆ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಆ.1 ಶನಿವಾರದಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಘಟನೆ ನಡೆದ ತಕ್ಷಣ ಶಾಸಕರು, ತಹಶೀಲ್ದಾರ್, ತಾಲೂಕು ಪಂಚಾಯತಿ, ಹಾಗೂ ನಗರಸಭೆ ಅಧಿಕಾರಿಗಳು ಮೊರಾರ್ಜಿ ವಸತಿ ಶಾಲೆಗೆ ಬರುವಷ್ಟರಲ್ಲಿ




ಅಡುಗೆ ದಾಸ್ತಾನು, ಹುಳ ಬಿದ್ದ ಅಕ್ಕಿ, ಕೊಳೆತ ತರಕಾರಿ, ಹಾಗೂ ಇನ್ನಿತರೆ ಸಾಮಗ್ರಿಗಳನ್ನು ಸ್ವಚ್ಛಗೊಳಿಸಿ ಸಾಕ್ಷ್ಯ ನಾಶ ಮಾಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ವಸತಿ ನಿಲಯಕ್ಕೆ ನೋಡಲು ಬಂದ ಅಧಿಕಾರಿಗಳ ಕಣ್ಣಿಗೆ ಎಲ್ಲವೂ "ಆಲ್ ಈಸ್ ರೈಟ್" ಎಂದು ತೋ–ರಿಸಲು ಸಿದ್ದಪಡಿಸಿದ್ದು ಅತ್ಯಂತ ಖಂಡನೀಯ.

ಅಲ್ಲದೆ ಮಧ್ಯಾಹ್ನದ ಊಟದ ನಂತರ 80ಕ್ಕೂ ಹೆಚ್ಚು ಮಕ್ಕಳ ಪೈಕಿ ಆಸ್ಪತ್ರೆ ದಾಖಲೆಗಳಲ್ಲಿ ಕೇವಲ 30 ಮಕ್ಕಳು ಮಾತ್ರ ಚಿಕಿತ್ಸೆ ಪಡೆದಿದ್ದಾರೆ ಎಂದು ಸುಳ್ಳು ಮಾಹಿತಿ ನೀಡಲಾಗಿದೆ. ರಾಜಕಾರಣಿಗಳ ಮತ್ತು ಮೇಲಾಧಿಕಾರಿಗಳ ಒತ್ತಡಕ್ಕೆ ಮಣಿದು ಸಂಜೆ 4 ಗಂಟೆಯೊಳಗೆ ಯಾವ ಮಕ್ಕಳಿಗೂ ತೊಂದರೆಯಾಗಿಲ್ಲ ಎಂಬಂತೆ ಅವಸರದಲ್ಲಿ ಡಿಸ್ಚಾರ್ಜ ಮಾಡಿ, ಮನೆಗೆ ಕಳುಹಿಸಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಈ ಕಾರಣವಾಗಿ ಪ್ರಾಂಶುಪಾಲ್, ವಾರ್ಡನ್, ಸೂಪರಡೆಂಟ್, ಹಾಗೂ ಸಂಬಂಧಪಟ್ಟ ಅಡುಗೆ ಸಿಬ್ಬಂದಿಗಳನ್ನು ಸೇವೆಯಿಂದ ಅಮಾನತು ಮಾಡಬೇಕು. ರಾಜ–ಕೀಯ ಒತ್ತಡ ಮತ್ತು ಆಸ್ಪತ್ರೆ ದಾಖಲೆಗಳಲ್ಲಾದ ಅಕ್ರಮ ಬಗ್ಗೆ ತನಿಖೆಯಾಗಬೇಕು. ವಸತಿ ಶಾಲೆಗೆ ಪೂರೈಕೆ ಆಗುವ ಪಡಿತರ ಸಾಮಗ್ರಿಗಳ ಗುಣಮಟ್ಟವನ್ನು ತನಿಖೆಗೆ ಒಳಪಡಿಸಬೇಕು. ಜಿಲ್ಲಾಡಳಿತ ಕೂಡಲೇ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ತಪ್ಪಿದರೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಜಿಲ್ಲೆಯಾದ್ಯಂತ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ: ಜಿಲ್ಲಾ ಉಪಾಧ್ಯಕ್ಷ ಶರಣಪ್ಪ ಹಂಚಿನಾಳ, ಜಿಲ್ಲಾ ಜಂಟಿ ಕಾರ್ಯದರ್ಶಿ ಜಿ.ವೆಂಕಟೇಶ ಮಾನ್ವಿ, ತಾಲೂಕು ಅಧ್ಯಕ್ಷ ವೀರೇಶ ಕೋಟೆ, ತಾಲೂಕು ಕಾರ್ಯಾಧ್ಯಕ್ಷ ಹಸೇನ್ ಸಾಬ್ ಮೇಸ್ತ್ರಿ, ತಾಲೂಕು ಪ್ರಧಾನ ಕಾರ್ಯದರ್ಶಿ ಗಿರಿಯಪ್ಪ ರಾಠೋಡ್, ಸಂಘಟನಾ ಕಾರ್ಯದರ್ಶಿ ಸಾಧಿಕ್, ಸೋಮನಾಥ, ಲಕ್ಷ್ಮಣ, ಹಸೇನ್, ಸೇರಿ ಅನೇಕ ಪದಾಧಿಕಾರಿಗಳಿದ್ದರು.

## ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ

## ನಾಡು, ನುಡಿಗಾಗಿ ನಿರಂತರ ಶ್ರಮ : ಬಳೆ ಮಲ್ಲಿಕಾರ್ಜುನ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ನಾಡು, ನುಡಿಗಾಗಿ ನಿರಂತರವಾಗಿ ಶ್ರಮಿಸುವ ಜೊತೆಗೆ ಜೀವನವನ್ನೇ ಕನ್ನಡತನಕ್ಕೆ ಮುಡುಪಾಗಿಟ್ಟಿದ್ದೇವೆ ಎಂದು ಕರವೇ (ನಾರಾಯಣಗೌಡ ಬಣ) ತಾಲೂಕು ಅಧ್ಯಕ್ಷ ಬಳೆ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ 4ನೇ ವಾರ್ಡಿನ ಸಂತೆ ಮಾರುಕಟ್ಟೆ ಬಳಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾಧ್ಯಕ್ಷ ಅಂಗಡಿ ಶಂಕ್ರಪ್ಪ ಅವರ ಜನ್ಮದಿನದ ಪ್ರಯುಕ್ತ ಅವರ ಸಮ್ಮುಖದಲ್ಲಿ ಶಾಲಾ ಮಕ್ಕಳಿಗೆ ಉಚಿತವಾಗಿ ನೋಟ್ ಬುಕ್, ಪೆನ್ನು, ಪೆನ್ಸಿಲ್ ವಿತರಿಸಿ ಮಾತನಾಡಿ, ಇಂದಿನ ಆಧುನಿಕ ಭಾರತದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದ್ದು, ಶಿಕ್ಷಕರು ಮಕ್ಕಳಿಗೆ ಗುಣಾತ್ಮಕವಾಗಿ ಶಿಕ್ಷಣ ಕೊಟ್ಟಾಗ ಮಾತ್ರ ಭವಿಷ್ಯ ಉಜ್ವಲವಾಗುವ ಜೊತೆಗೆ ದೇಶದ ಉತ್ತಮ



ನಾಗರಿಕರಾಗಿ ಹೊರ ಹೊಮ್ಮಲು ಸಾಧ್ಯ ಎಂದರು.

ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಮಾತನಾಡಿ, ನಾಡಿನ ನೆಲ, ಜಲ, ಭಾಷೆ ಉಳಿವಿಗಾಗಿ ನಿರಂತವಾಗಿ ಕರವೇ ಪದಾಧಿಕಾರಿಗಳು ಶ್ರಮಿಸುತ್ತಿರುವುದು ಶ್ಲಾಘನೀಯವಾಗಿದೆ. ಇತ್ತೀಚಿನ ದಿನಮಾನದಲ್ಲಿ ಖಾಸಗಿ ಶಾಲೆಗಳ ಹಾವಳಿಗೆ ಸರ್ಕಾರಿ ಶಾಲೆಗಳ ಶಿಕ್ಷಣ ಕುಂಠಿತವಾಗಿರುವುದು ವಿಪರ್ಯಾಸವಾಗಿದೆ. ಆದ್ದರಿಂದ ಸರ್ಕಾರಿ ಶಾಲೆಯ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಟ್ಟರೆ, ಮುಂದಿನ ದಿನದಲ್ಲಿ ಸರ್ಕಾರಿ ಶಾಲೆಗಳು ಉಳಿಯಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಮುಖ್ಯಗುರು ಈಶ್ವರಪ್ಪ, ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷ ಚಾನಾಳ್ ತಿಪ್ಪಾರೆಡ್ಡಿ, ತಾಲೂಕು ಉಪಾಧ್ಯಕ್ಷರಾದ ವಿ.ಬಿ.ನಾಗರಾಜ, ಅಕ್ಕಿ ಜಿಲಾನ್, ಯುವ ಘಟಕ ಅಧ್ಯಕ್ಷ ರಾಘವೇಂದ್ರ, ಉಪಾಧ್ಯಕ್ಷ ದೊಡ್ಡಮನೆ ಗಣೇಶ, ಕಾರ್ಮಿಕ ಘಟಕ ಆಧ್ಯಕ್ಷ ಪೇಂಟ್ ಬಸವರಾಜ, ವಿದ್ಯಾರ್ಥಿ ಘಟಕ ಅಧ್ಯಕ್ಷ ಮುನ್ನಾ, ಬಳ್ಳಾರಿ ತಾಲೂಕು ಅಧ್ಯಕ್ಷ ಚಾನಾಳ್ ಮಲ್ಲಿಕಾರ್ಜುನ, ಕುರುಗೋಡು ತಾಲೂಕು ಅಧ್ಯಕ್ಷ ಗೆಣಕಿಹಾಳ್ ವಿರೇಶ, ಮೆಟ್ರಿ ಗ್ರಾಮ ಘಟಕ ಅಧ್ಯಕ್ಷ ದೊಡ್ಡಬಸುವ ಮೆಟ್ರಿ, ಮಹಿಳೆ ಘಟಕ ಅಧ್ಯಕ್ಷೆ ಮುಕ್ಕುಂದಿ ಮಮತ, ಉಪಾಧ್ಯಕ್ಷೆ ಹೊನ್ನಳ್ಳಿ ಶ್ರೀದೇವಿ, ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಮುಖಂಡರಾದ ಪಿ.ಶಂಭುಲಿಂಗ, ಕಟ್ಟೆ ವಿನಯ, ಗೌಳೇರು ಮಂಜುನಾಥ, ಸಿದ್ದೇಶ, ಸೇರಿದಂತೆ ಪದಾಧಿಕಾರಿಗಳು ಇದ್ದರು.

## ನಿವೃತ್ತಿ ಹಿರಿಯ ಬಡ್ತಿ ಮುಖ್ಯಶಿಕ್ಷಕಿ ಚನ್ನಬಸಮ್ಮಗೆ ಸನ್ಮಾನದ ಬೀಳ್ಕೊಡಿಗೆ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲೂಕಿನ ದೇವಲಾಪುರ ಗ್ರಾಮದ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಹಿರಿಯ ಬಡ್ತಿ ಮುಖ್ಯಶಿಕ್ಷಕಿ ಚನ್ನಬಸಮ್ಮ ಅವರ ವಯೋ ನಿವೃತ್ತಿ ಹಿನ್ನಲೆ ಅವರಿಗೆ ಅದ್ದೂರಿಯಾಗಿ ಸನ್ಮಾನಿಸಿ ಗೌರವಿಸುವ ಮೂಲಕ ಶುಕ್ರವಾರ ಬೀಳ್ಕೊಡಲಾಯಿತು.**

ಮುಖ್ಯಗುರು ಎಚ್.ಪಿ.ಸೋಮಶೇಖರ ಮಾತನಾಡಿ, ಸರ್ಕಾರಿ ಕೆಲಸ ದೇವರ ಕೆಲಸ ಎಂಬಂತೆ ಸರ್ಕಾರಿ ಹುದ್ದೆ ಅಲಂಕ–ರಿಸಿದ ದಿನದಿಂದಲೂ ಮಕ್ಕಳ ಮತ್ತು ಶಾಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ. ಕಳೆದ 39 ವರ್ಷ ಸತತ ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಮುಂದಿನ ವಯೋ ನಿವೃತ್ತಿ ಜೀವನವೂ ಸದಾ ಆರೋಗ್ಯ, ಸಮೃದ್ಧಿಯಿಂದ ಕೂಡಿರಲಿ ಎಂದರು.

ನಂತರ ವಯೋ ನಿವೃತ್ತಿ ಹೊಂದಿದ ಬಡ್ತಿ ಮುಖ್ಯಶಿಕ್ಷಕಿ ಚನ್ನಬಸಮ್ಮ ಸನ್ಮಾನ ಸ್ವೀಕರಿಸಿ ಮಾತನಾಡಿ, ಮಕ್ಕಳೊಂದಿಗೆ ಹಲವು ವರ್ಷ ಕಳೆದಿರುವೆ. ಮಕ್ಕಳು ಭವಿಷ್ಯ ಶಿಕ್ಷಣದಲ್ಲಿ ಅಡಗಿದ್ದು, ಅವರ ಏಳಿಗೆ ಮತ್ತು ಕಲಿಕೆಗಾಗಿ ದಿನನಿತ್ಯದಲ್ಲಿ ಶ್ರಮಿಸಲಾಗುತ್ತಿತ್ತು. ಈಗ ಅನಿವಾರ್ಯವಾಗಿ ವಯೋ ನಿವೃತ್ತಿ ಹೊಂದಿ, ಹೊಸಬರಿಗೆ ಅವಕಾಶ ಮಾಡಿಕೊಡಬೇಕಾಗಿದೆ. ಇಲ್ಲಿತನ ನಮ್ಮ ಜೊತೆಗೂಡಿ ಕೆಲಸಕ್ಕೆ ಸಹಕರಿಸಿ, ತಮಗೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ತದನಂತರ ವಯೋ ನಿವೃತ್ತಿ ಹೊಂದಿದ ಬಡ್ತಿ ಮುಖ್ಯಶಿಕ್ಷಕಿ ಚನ್ನಬಸಮ್ಮ ಇವರಿಗೆ ಶಾಲಾ ಆಡಳಿತ ಮಂಡಳಿಯವರು, ಮುಖ್ಯಗುರುಗಳು, ಶಿಕ್ಷಕ ವೃಂದದರು, ಸಂಘ–ಸಂಸ್ಥೆಯವರು, ಪೋಷಕರು ಸನ್ಮಾನಿಸಿ ವಿಜೃಂಭಣೆಯಿಂದ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯ ಕೆ.ಶಿವುಕುಮಾರ, ಸೊಸೈಟಿ ಅಧ್ಯಕ್ಷ ಗೊರವರ ಹನುಮಂತಪ್ಪ, ಪ್ರೌಢಶಾಲಾ ಮುಖ್ಯಗುರು



ನಂದಕಿಶೋರ್, ಎಸ್ಡಿಎಂಸಿ ಅಧ್ಯಕ್ಷ ಶಿವರಾಜ್ ಕುಮಾರ, ದೇವರಮನೆ ಪಂಪಯ್ಯ, ಸದಸ್ಯರಾದ ಸಿ.ಡಿ.ಗಾದೆಪ್ಪ, ಲಿಗಾಡಿ ತಿಪ್ಪಯ್ಯ, ಎಚ್.ಕಾಮಾಕ್ಷಿ, ಬಿ.ನಾಗೇಶ್ವರಿ, ಗೊರವರ ಲಕ್ಷ್ಮಿ , ಹೊಸನಗರ ಶಾಲೆ ಮುಖ್ಯಗುರು ಪ್ರಕಾಶ್, ಎಸ್ಡಿಎಂಸಿ ಅಧ್ಯಕ್ಷ ಭಾವಿಕಟ್ಟೆ ಹೊನ್ನೂರಸ್ವಾಮಿ, ಮುಖಂಡರಾದ ಗೌಡ್ರು ಅಂಜಿನಪ್ಪ, ಉಮೇಶಗೌಡ, ಸುರೇಶಗೌಡ, ಗೌಡ್ರು ಷಣ್ಮುಕ, ಪೂಜಾರಿ ರಮೇಶ, ಕುಂಬಾರು ವಿರುಪಾಕ್ಷಿ, ಬೂದಾಳ್ ರವಿ, ಬಳ್ಳಾರಿ ರಮೇಶ, ದೇವರ ಮನೆ ಮಲ್ಲಿಕಾರ್ಜುನ, ಎನ್.ನಾಗರಾಜ, ಕೆ.ಕರಿಬಸಪ್ಪ, ಟಿ.ಎನ್.ಆರ್.ರಮೇಶ, ಎನ್.ನಾಗರಾಜ, ಸಂಗ್ಟಿ ಅಂಜಿನಪ್ಪ, ಗೌಡ್ರು ವೆಂಕಟೇಶ, ರಾಜ, ಜಗದೀಶ ಸೇರಿದಂತೆ ಮುಖ್ಯಗುರುಗಳು, ಶಿಕ್ಷಕರು, ಪೋಷಕರು, ಮುಖಂಡರು ಇದ್ದರು.


## ವಿವೇಕಾನಂದ ಕಾಲೇಜಿನಲ್ಲಿ ರಸ್ತೆ ಸುರಕ್ಷತೆ, ಕಾನೂನು ಅರಿವು ಹಾಗೂ ಸೈಬರ್ ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕಾನೂನು, ರಸ್ತೆ ಸುರಕ್ಷತೆ ಹಾಗೂ ಸಾಮಾಜಿ–ಕ ಜವಾಬ್ದಾರಿಗಳ ಕುರಿತು ಅರಿವು ಹೊಂದಬೇಕು. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಅಪಘಾತಗಳನ್ನು ತಡೆಗಟ್ಟುವಲ್ಲಿ ಪ್ರತಿಯೊಬ್ಬರೂ ಸಹಕ–ರಿಸಬೇಕು ಎಂದು ದೇವದುರ್ಗ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು ತಿಳಿಸಿದರು.**

ದೇವದುರ್ಗ ಪೊಲೀಸ್ ಠಾಣಾ ವ್ಯಾಪ್ತಿಯ ವಿವೇಕಾನಂದ ಕಾಲೇಜಿನಲ್ಲಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ವಾಹನ ಚಾಲನೆ ವೇಳೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದು, ಸಂಚಾರ ನಿಯಮಗಳ ಪಾಲನೆ, ಬಾಲ್ಯವಿವಾಹ ನಿಷೇಧ, ಪೋಕ್ಸೋ ಕಾಯ್ದೆ, ಮಾದಕ ವಸ್ತುಗಳ ನಿಯಂತ್ರಣ ಹಾಗೂ ಸೈಬರ್ ಅಪರಾಧಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಚಾಲಕ ಮತ್ತು ಹಿಂಬದಿ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ತಿಳಿಸಿದರು.

ಹೆಲ್ಮೆಟ್ ಧರಿಸುವುದು ಕೇವಲ ಕಾನೂನು ಪಾಲನೆಗಾಗಿ ಮಾತ್ರವಲ್ಲದೆ, ಅಪಘಾತದ ಸಂದರ್ಭದಲ್ಲಿ ಜೀವ ರಕ್ಷಿಸುವ ಪ್ರಮುಖ ಸುರಕ್ಷತಾ ಕ್ರಮವಾಗಿದೆ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಅತಿವೇಗದ ಚಾಲನೆ, ನಿರ್ಲಕ್ಷ್ಯ, ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ ಹಾಗೂ



ಸಂಚಾರ ನಿಯಮಗಳ ಉಲ್ಲಂಘನೆಯಿಂದ ಸಂಭವಿಸಬಹುದಾದ ಅಪಘಾತಗಳ ಕುರಿತು ವಿವರಿಸಿದರು. ವಾಹನ ಚಾಲನೆಗೆ ಸಂಬಂಧಿಸಿದ ನಿಯಮಗಳನ್ನು ಪಾಲಿಸುವುದು, ಸಂಚಾರ ಸೂಚನಾ ಫಲಕಗಳನ್ನು ಗೌರವಿಸುವುದು ಹಾಗೂ ಅಪ್ರಾಪ್ತ ವಯಸ್ಸಿನಲ್ಲಿ ವಾಹನ ಚಾಲನೆ ಮಾಡದಿರುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಬಾಲ್ಯವಿವಾಹವು ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಮಾಜಿ–ಕ ಅನಿಷ್ಟ ಪದ್ಧತಿಯಾಗಿದೆ ಎಂದು ಹೇಳಿದರು. ಬಾಲ್ಯವಿವಾಹ ನಡೆಯುತ್ತಿರುವ ಅಥವಾ ನಡೆಯುವ ಸಾಧ್ಯತೆ ಇರುವ ಕುರಿತು ಮಾಹಿತಿ ದೊರೆತಲ್ಲಿ ಅದನ್ನು ಮರೆಮಾಚದೆ ಸಂಬಂಧಪಟ್ಟ ಅಧಿಕಾರಿಗಳು, ಶಿಕ್ಷಕರು, ಪೋಷಕರು ಅಥ–ವಾ ಪೊಲೀಸ್ ಇಲಾಖೆಗೆ ತಕ್ಷಣ ಮಾಹಿತಿ ನೀಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಮಕ್ಕಳನ್ನು ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಶೋಷಣೆಯಿಂದ ರಕ್ಷಿಸುವ ಉದ್ದೇಶದಿಂದ ಜಾ–ರಿಯಲ್ಲಿರುವ ಪೋಕ್ಸೋ (POCSO) ಕಾಯ್ದೆ ಕುರಿತು ವಿವರಿಸಿದರು. ಮಕ್ಕಳಿಗೆ ಯಾವುದೇ ರೀತಿಯ ಕಿರುಕುಳ ಅಥವಾ ಅನುಚಿತ ವರ್ತನೆ ಎದುರಾದಲ್ಲಿ ಮೌನವಾಗದೆ ವಿಶ್ವಾಸಾರ್ಹ ವ್ಯಕ್ತಿಗಳಿಗೆ ತಿಳಿಸಿ, ಅಗತ್ಯವಿದ್ದಲ್ಲಿ ಪೊಲೀಸ್ ಇಲಾಖೆಯ ನೆರವು ಪಡೆಯಬೇಕು ಎಂದು ಸಲಹೆ ನೀಡಿದರು. ಮಾದಕ ವಸ್ತುಗಳ ಸೇವನೆಯು ಯುವಜನರ ಆರೋಗ್ಯ, ಶಿಕ್ಷಣ, ಕುಟುಂಬ ಹಾಗೂ ಭವಿಷ್ಯವನ್ನು ಹಾಳುಮಾಡುತ್ತದೆ ಎಂದು ಎಚ್ಚರಿಸಿದರು. ಡ್ರಗ್ಸ್ ಬಳಕೆ, ಸಂಗ್ರಹಣೆ, ಮಾರಾಟ, ಸಾಗಾಣಿಕೆ ಮತ್ತು ವಿತರಣೆ ಕಾನೂನುಬಾಹಿರವಾಗಿದ್ದು, ಇಂತಹ ಕೃತ್ಯಗಳ ವಿರುದ್ಧ ಎನ್‌ಡಿಪಿಎಸ್ (NDPS) ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಮಾದಕ ವಸ್ತುಗಳ ಆಮಿಷಕ್ಕೆ ಒಳಗಾಗದೆ, ಆರೋಗ್ಯಕರ ಹಾಗೂ ಶಿಸ್ತುಬದ್ಧ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸೈಬರ್ ಅಪರಾಧಗಳ ಕುರಿತು ಮಾತನಾಡಿ, ಅಪರಿಚಿತ ವ್ಯಕ್ತಿಗಳಿಂದ ಬರುವ ಕರೆಗಳು, ಸಂದೇಶಗಳು, ನಕಲಿ ಲಿಂಕ್‌ಗಳು ಹಾಗೂ ಅನುಮಾನಾಸ್ಪದ ವೆಬ್‌ಸೈಟ್‌ಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ತಿಳಿಸಿದರು. ಬ್ಯಾಂಕ್ ಖಾತೆ ವಿವರಗಳು, ಎಟಿಎಂ ಪಿನ್, ಪಾಸ್‌ವರ್ಡ್ ಹಾಗೂ ಒಟಿಪಿ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾ–ರಿಯುತವಾಗಿ ಬಳಸಬೇಕು. ಅಪರಿಚಿತರೊಂದಿಗೆ ವೈಯಕ್ತಿಕ ಮಾಹಿತಿ, ಫೋಟೋ ಅಥವಾ ಇತರ ವಿವರಗಳನ್ನು ಹಂಚಿಕೊಳ್ಳುವಾಗ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು. ಸೈಬರ್ ವಂಚನೆ ಅಥವಾ ಆನ್‌ಲೈನ್ ಕಿರುಕುಳಕ್ಕೆ ಒಳಗಾದಲ್ಲಿ ತಕ್ಷಣ ಪೋಷಕರು, ಶಿಕ್ಷಕರು ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಹೇಳಿದರು. ವಿದ್ಯಾರ್ಥಿಗಳು ಕಾನೂನುಗಳ ಕುರಿತು ಅರಿವು ಹೊಂದಿ, ಸಂಚಾರ ನಿಯಮಗಳನ್ನು ಪಾಲಿಸುವುದರ ಜೊತೆಗೆ ಸಮಾಜದಲ್ಲಿ ನಡೆಯುವ ಅನಿಷ್ಟ ಚಟುವಟಿಕೆಗಳ ವಿರುದ್ಧ ಜಾಗೃತರಾಗಬೇಕು.

ತಮ್ಮ ಸುರಕ್ಷತೆಯೊಂದಿಗೆ ಇತರರ ಸುರಕ್ಷತೆಯನ್ನೂ ಕಾಪಾಡುವ ಜವಾಬ್ದಾರಿಯುತ ನಾಗರಿಕರಾಗಬೇಕು ಎಂದು ಪಿ.ಐ. ದೇವದುರ್ಗ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101